# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



NOW HAMPI TIMES E-PAPER HAS BEEN REACHED
50,000
Plus readers
Place Your Ads here
Reach New Audience



9448633038 Contact For: News, Events Coverage, Ads
hampitimes@gmail.com Valmiki Circle, Hosapete-583201



ಸಂಪುಟ:01 • ಸಂಚಿಕೆ:270 • ನೋಂದಣಿ ನಂ.:KARKAN27911 • ವಿಜಯನಗರ • 23.03.2024 • ಶನಿವಾರ • ಪುಟ:04 • ಬೆಲೆ:2

Volume:01 • Issue:270 • Reg.No:KARKAN27911 • VIJAYANAGARA • 23.03.2024 • Saturday • Page:04 • Rs:2







# ಕೈ ಶಾಸಕರಿಗಿಲ್ಲ ಗೆಲುವ ಖಚಿತತೆ ಮೋದಿ ಮತ್ತೊಮ್ಮೆ ಪ್ರಧಾನಿ ನಿಶ್ಚಿತ

## ಬಿಜೆಪಿ ಅಭ್ಯರ್ಥಿ ಶ್ರೀರಾಮುಲು ಹೇಳಿಕೆ | ಬೂತ್ ವಿಜಯ ಅಭಿಯಾನ ಉದ್ಘಾಟನೆ

**ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯದಲ್ಲಿ ಬಿಎಸ್‌ವೈ ಸಿಎಂ ಇದ್ದಾಗ ಭರಪೂರ ಮಳೆ ಬಂದು ಹಳ್ಳ, ಕೊಳ್ಳ, ಜಲಾಶಯಗಳು ಭರ್ತಿಯಾಗಿ ನಾಡು ಸಮೃದ್ಧವಾಗಿತ್ತು. ಆದರೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಮಳೆ ಇಲ್ಲದೆ ರಾಜ್ಯ ಬರಗಾಲಕ್ಕೆ ತುತ್ತಾಗಿದೆ. ಜನ, ಜಾನುವಾರುಗಳು ನೀರಿಗಾಗಿ ಪರದಾಡಬೇಕಾದ ಪರಿಸ್ಥಿತಿ ಎದುರಾಗಿದೆ ಎಂದು ಬಳ್ಳಾರಿ ಲೋಕಸಭಾ ಬಿಜೆಪಿ ಅಭ್ಯರ್ಥಿ ಶ್ರೀರಾಮುಲು ಕಾಂಗ್ರೆಸ್ ಸರ್ಕಾರದ ಆಡಳಿತದ ವಿರುದ್ಧ ವಾಗ್ದಾಳಿ ನಡೆಸಿದರು.

ನಗರದ ಶ್ರೀವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಬಿಜೆಪಿ ಬೂತ್ ವಿಜಯ ಅಭಿಯಾನದಲ್ಲಿ ಶುಕ್ರವಾರ ಮಾತನಾಡಿದರು. ಮಳೆ, ಬೆಳೆ ಇಲ್ಲದ್ದರಿಂದ ರೈತರ ಸಂಕಷ್ಟಕ್ಕೀಡಾಗಿದ್ದಾರೆ. ರೈತರು ಆತ್ಮಹತ್ಯೆ ಹಾದಿ ತುಳಿದಿದ್ದಾರೆ. ರೈತರು ಕಣ್ಣೀರಲ್ಲಿ ಕೈತೊಳೆಯುತ್ತಿದ್ದಾರೆ. ಉದ್ಯೋಗವಿಲ್ಲದೆ ಹಲವೆಡೆ ಗುಳೆ ಹೋಗುತ್ತಿದ್ದಾರೆ. ಅಭಿವೃದ್ಧಿ ಕೆಲಸಗಳಿಗೆ ರಾಜ್ಯ ಸರ್ಕಾರ ಅನುದಾನ ನೀಡದ್ದರಿಂದ ಶಾಸಕರು ಹೊರಗಡೆ ಬರುತ್ತಿಲ್ಲ. ಅನೇಕ ಕಾಂಗ್ರೆಸ್ ಶಾಸಕರು ಹೊರಗಡೆ ಬರಲು ಹಿಂದೇಟು ಹಾಕುತ್ತಿದ್ದಾರೆ. ದೇಶದ ಎಲ್ಲೆಲ್ಲೂ ಮೋದಿ ಮತ್ತೊಮ್ಮೆ ಎಂಬ ಕಹಳೆ ಮೊಳಗುತ್ತಿದೆ. ವಿಶ್ವದ ಜನರ ಚಿತ್ತ ಭಾರತದತ್ತವಿದ್ದು, ಇಲ್ಲಿಯ ಆಡಳಿತವನ್ನು ಗಮನಿಸುತ್ತಿವೆ.



ದೇಶದಲ್ಲಿ ಮೋದಿ ಮತ್ತೊಮ್ಮೆ ಪ್ರಧಾನಿಯಾಗಲು 273 ಸಂಸದರ ಆಯ್ಕೆಯಾಗಬೇಕಿದೆ. ಚುನಾವಣೆಗೂ ಮುನ್ನವೇ ನಾಲ್ಕು ನೂರಕ್ಕೂ ಅಧಿಕ ಬಿಜೆಪಿ ಸಂಸದರು ಗೆಲ್ಲಲಿವೆ ಎಂಬ ಸಮೀಕ್ಷೆಗಳು ಹೇಳುತ್ತಿದ್ದು ಮೋದಿ ಮತ್ತೊಮ್ಮೆ ಪ್ರಧಾನಿಯಾಗುವುದು ನಿಶ್ಚಿತ. ಇಡೀ ಭಾರತವೇ ಪ್ರಧಾನಿ ಮೋದಿ ಅವರ ಪರಿವಾರವಾಗಿದೆ. ಕಾಂಗ್ರೆಸ್ ನಾಯಕರಿಗೆ ಟಿಕೆಟ್ ಕೊಟ್ಟರೂ ನಿಲ್ಲದ ಸ್ಥಿತಿಯಲ್ಲಿದ್ದಾರೆ. ಸೋನಿಯಾಗಾಂಧಿ, ರಾಹುಲ್‌ಗಾಂಧಿ, ಪ್ರಿಯಾಂಕ ಗಾಂಧಿ ಸ್ಥಿತಿಯೂ ಹೊರತಾಗಿಲ್ಲ. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಕಾಂಗ್ರೆಸ್‌ನಿಂದ ಆದ ಅಪಮಾನವನ್ನೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮರೆತಿಲ್ಲ. ದೇಶದ ಅಭಿವೃದ್ಧಿ ಪ್ರತಿಯೊಬ್ಬ ಮತದಾರರ ಕೈಯಲ್ಲಿದೆ. ಮತ್ತೊಮ್ಮೆ ಸೇವೆ ಮಾಡಲು ಮತಹಾಕುವ ಮೂಲಕ ನಮಗೆ ಶಕ್ತಿ ತುಂಬಿ ಅವಕಾಶ ಕಲ್ಪಿಸಿಕೊಡಬೇಕು ಎಂದರು.

ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಮಾತನಾಡಿ, ಕಾರ್ಯಕರ್ತರು ಬೂತ್‌ಮಟ್ಟದಲ್ಲೆ ಅತ್ಯಂತ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಿ, ಶ್ರೀರಾಮುಲು ಅವರನ್ನು ಅತ್ಯಧಿಕ ಮತಗಳ ಅಂತರದಿಂದ ಗೆಲ್ಲಿಸಲು ಸನ್ನದ್ಧರಾಗಬೇಕು. ಶ್ರೀರಾಮುಲು ಅವರನ್ನು ಸಂಸದರನ್ನಾಗಿಸುವ ಮೂಲಕ ನರೇಂದ್ರ ಮೋದೀಜಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ಶಕ್ತಿ ತುಂಬಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಎಂಎಲ್ಸಿ ರವಿಕುಮಾರ ಮಾತನಾಡಿ, ದೇಶದ ಯಾವ ಟಿವಿಗಳಲ್ಲಿ ನೋಡಿದರೂ ಮೋದಿ ಮತ್ತೊಮ್ಮೆ ಪ್ರಧಾನಿ ಎನ್ನುವುದನ್ನು ಚುನಾವಣೆ ಫಲಿತಾಂಶದ ಮುನ್ನವೆ ಖಚಿತವಾಗಿ ಹೇಳುತ್ತಿರುವುದು ಅದ್ಭುತಗಳಲ್ಲಿ ಅತ್ಯದ್ಭುತವಾಗಿದೆ. ಪ್ರತಿಯೊಬ್ಬರೂ ತಮ್ಮ ಮತದಾನ ಬಗ್ಗೆ ನಿರ್ಲಕ್ಷ್ಯತೋರದೆ ಓಟು ಹಾಕಬೇಕು. ಮತದಾನ ಮೌಲ್ಯಕಟ್ಟಲು ಸಾಧ್ಯವಿಲ್ಲ. ಒಂದೇ ಒಂದು ಓಟಿನಿಂದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿ ಹುದ್ದೆಯಿಂದ ವಂಚಿತರಾಗಿದ್ದನ್ನು ಮರೆಯಬಾರದು. ಪ್ರತಿ ಓಟು ಮೌಲ್ಯಯುತವಾಗಿರುತ್ತದೆ. ನಿರ್ಲಕ್ಷ್ಯ ಮಾಡಿದವರ ನಂತರ ಕಣ್ಣೀರಿಟ್ಟರೂ ಪ್ರಯೋಜನವಾಗಲಿಲ್ಲ ಎಂದು ತಿಳಿ ಹೇಳಿದರು. 400 ಸೀಟುಗಳ ಗುರಿ ನಮ್ಮದಾಗಿದೆ ಎಂದರು.

ಬಿಜೆಪಿ ಪದಾಧಿಕಾರಿಗಳಾದ ಶಂಕರ ಮೇಟಿ, ರಾಘವೇಂದ್ರ, ಸಿದ್ದಾರ್ಥಸಿಂಗ್, ಕಿಚಿಡಿ ಕೊಟ್ರೇಶ, ಸಾಲಿಸಿದ್ದಯ್ಯಸ್ವಾಮಿ, ಬಂಗಾರು ಹನುಮಂತ, ಅಶೋಕ ಜೀರೆ, ಅಯ್ಯಾಳಿ ತಿಮ್ಮಪ್ಪ, ಚಂದ್ರಶೇಖರ ಹಲಗೇರಿ ಪೂಜಪ್ಪ, ಜೀವರತ್ನ, ಭಾರತಿ ಇತರರು ಇದ್ದರು.

## ಮೈಕ್ರೋ ನ್ಯೂಸ್

### ವಿಶ್ವಗುರು ಶ್ರೀ ಮಧ್ವಾಚಾರ್ಯರ ಜಯಂತಿ ಸರ್ಕಾರದಿಂದ ಆಚರಣೆಗೆ ಒತ್ತಾಯ



**ಹಂಪಿ ಟೈಮ್ಸ್ ಹೊಸಪೇಟೆ**

ಸರ್ಕಾರದಿಂದ ವಿಶ್ವಗುರು ಶ್ರೀ ಮಧ್ವಾಚಾರ್ಯರ ಜಯಂತಿ ಆಚರಣೆಗೆ ಸರ್ಕಾರದ ಆದೇಶ ಹಾಗೂ ಅನುಮೋದನೆ ಶೀಘ್ರ ಹೊರಡಿಸಬೇಕೆಂದು ಒತ್ತಾಯಿಸಿ ವಿಶ್ವಮಧ್ವ ಮತ ವೇಲ್ಫೇರ್ ಫೌಂಡೇಶನ್‌ವತಿಯಿಂದ ವಿಜಯನಗರ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಶುಕ್ರವಾರ ಮನವಿ ಸಲ್ಲಿಸಲಾಯಿತು.

ವಿಜಯನಗರ ಜಿಲ್ಲಾಧ್ಯಕ್ಷರಾದ ಸುರೇಂದ್ರಆಚಾರ್ಯರು ಮಾತನಾಡಿ, ವಿಶ್ವಮಧ್ವ ಮತ ವೇಲ್ಫೇರ್ ಫೌಂಡೇಶನ್ (ರಿ) ಬೆಂಗಳೂರು, ಸಂಸ್ಥಾಪಕ ಅಧ್ಯಕ್ಷರಾದ ವೆಂಕೋಬರಾವ್ ಇವರ ಆದೇಶದ ಮೇರೆಗೆ ವಿಜಯನಗರ ಜಿಲ್ಲಾ ಘಟಕದ ವತಿಯಿಂದ ಪ್ರತಿ ವರ್ಷವೂ ಆಶ್ವೀಜ ಮಾಸದ ಶುಕ್ಲಪಕ್ಷದ ವಿಜಯದಶಮಿ ದಿವಸದಂದು ಕರ್ನಾಟಕದಲ್ಲೇ ಜನಿಸಿದ ವಿಶ್ವಗುರು ಶ್ರೀ ಮಧ್ವಾಚಾರ್ಯರ ಜಯಂತಿ ಆಚರಣೆ ನಡೆಯುತ್ತದೆ. ವಿಶ್ವಗುರು ಶ್ರೀ ಮಧ್ವಾಚಾರ್ಯರು ಎಂಬ ಕಿರುಹೊತ್ತಿಗೆಯನ್ನು ನಮ್ಮ ಸಂಘಟನೆಯ ಮುಖಾಂತರ ಕರ್ನಾಟಕ ಸರ್ಕಾರಕ್ಕೆ ಹಾಗೂ ವಿಜಯನಗರ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಸಲ್ಲಿಸಲಾಗಿದೆ. ಆದ್ದರಿಂದ ಆದಷ್ಟು ಬೇಗ ಸರ್ಕಾರದಿಂದಲೇ ಆಚರಣೆ ಮಾಡಬೇಕು ಎಂದು ಮನವಿ ಮಾಡಿದ್ದೇವೆ ಎಂದರು. ಈ ಸಂದರ್ಭದಲ್ಲಿ ವಿಶ್ವಮಧ್ವ ಮತ ವೇಲ್ಫೇರ್ ಫೌಂಡೇಶನ್ ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಹೆಚ್.ನರಸಿಂಹಾಚಾರ್ಯರು, ಗುರುರಾಜ ಕುಲಕರ್ಣಿ, ರಾಜೇಶ ಆಚಾರ್ಯರು, ವಾಸು ಮತ್ತಿತರು ಹಾಜರಿದ್ದರು.

## ಅನುಮಾನಾಸ್ಪದ ಬ್ಯಾಂಕ್ ವ್ಯವಹಾರಗಳ ಮೇಲೆ ನಿಗಾ

**ಹಂಪಿ ಟೈಮ್ಸ್ ಹೊಸಪೇಟೆ**



ಚುನಾವಣಾ ಆಯೋಗದ ಮಾರ್ಗಸೂಚಿಯನ್ವಯ ನಿಯಮಗಳನ್ನು ಪಾಲನೆ ಮಾಡಬೇಕು ಎಂದು ಬ್ಯಾಂಕಿನ ಅಧಿಕಾರಿಗಳಿಗೆ ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಾರ್ಚ 22ರಂದು ಜಿಲ್ಲೆಯ ವಿವಿಧ ಬ್ಯಾಂಕಿನ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು. ಚುನಾವಣೆ ಪ್ರಕ್ರಿಯೆಯು ಅತ್ಯಂತ ಪಾರದರ್ಶಕವಾಗಿ ನಡೆಯಬೇಕಿದೆ. ಈ ನಿಟ್ಟಿನಲ್ಲಿ ಚುನಾವಣೆಯ >>4

## ನೈರುತ್ಯ ರೈಲ್ವೆ ಪ್ರಯಾಣ ಧರ ಇಳಿಕೆ

**ಹಂಪಿ ಟೈಮ್ಸ್ ಹೊಸಪೇಟೆ**

ನೈರುತ್ಯ ವಲಯದ ವ್ಯಾಪ್ತಿಯಲ್ಲಿ ಸಂಚರಿಸುತ್ತಿರುವ ಹುಬ್ಬಳ್ಳಿ – ತಿರುಪತಿ ಪ್ರಯಾಣಿಕರ ಗಾಡಿ ಸಂಖ್ಯೆ : 07657/07658 ಟಿಕೆಟ್ ಧರಗಳನ್ನು ಮಾರ್ಚ್ ತಿಂಗಳಿನಿಂದ ಹೆಚ್ಚುವರಿ ಟಿಕೆಟ್‌ಧರ ವ್ಯವಸ್ಥೆಯನ್ನು ಹಿಂಪಡೆದು ಕೋವಿಡ್ 19 ಪೂರ್ವದ ದಿನಗಳಲ್ಲಿ ಚಾಲ್ತಿಯಲ್ಲಿದ್ದ ಹಳೇ ಟಿಕೆಟ್ ಧರ ವ್ಯವಸ್ಥೆಯನ್ನು ಮರು ಜಾರಿಗೊಳಿಸಿದ್ದು, ಪ್ರಯಾಣಿಕರು ಪ್ರಯೋಜನಪಡೆಯಬೇಕು ಎಂದು ವಿಜಯನಗರ ರೈಲ್ವೇ ಕ್ರಿಯಾಸಮಿತಿ ಅಧ್ಯಕ್ಷ ವೈ.ಯಮುನೇಶ, ಕಾರ್ಯದರ್ಶಿ ಕೆ.ಮಹೇಶ ತಿಳಿಸಿದ್ದಾರೆ.



ಹುಬ್ಬಳ್ಳಿ–ತಿರುಪತಿ ರೈಲಿನಲ್ಲಿ ಹೊಸಪೇಟೆಯಿಂದ ಬಳ್ಳಾರಿಗೆ ಹೆಚ್ಚುವರಿ ದರ 55/–ರೂಗಳನ್ನು ರದ್ದುಗೊಳಿಸಿ ಈಗ 20/– ರೂ ಹಳೇ ದರ ಜಾರಿಗೊಳಿಸಲಾಗಿದೆ ಹಾಗೂ ಹೊಸಪೇಟೆಯಿಂದ ಗುಂತಕಲ್‌ಗೆ 35/– ರೂ ತಿರುಪತಿಗೆ 85/– ರೂ ಹೊಸಪೇಟೆಯಿಂದ ಹುಬ್ಬಳ್ಳಿಗೆ ರೂ.35/– ಹಳೇ ದರ ಜಾರಿಗೊಳಿಸಲಾಗಿದೆ. ಅದೇ ರೀತಿ ಸಂಜೆ 4.50 ಗಂಟೆಗೆ ಹೊಸಪೇಟೆಯಿಂದ ನಿರ್ಗಮಿಸುವ ಹೊಸಪೇಟೆ–ದಾವಣಗೆರೆ– ಹರಿಹರ ಗಾಡಿ ಸಂಖ್ಯೆ : 06245/06246 ರೈಲಿನ ಟಿಕೆಟ್ ದರಗಳು ಇಳಿಕೆಯಾಗಿದ್ದು ಹೊಸಪೇಟೆಯಿಂದ ಹಗರಿಬೊಮ್ಮನಹಳ್ಳಿ 10/– ರೂ ದಾವಣಗೆರೆಗೆ 35/– ರೂ ಪರಿಷ್ಕರಿಸಲಾಗಿದ್ದು, ರೈಲ್ವೆ ಸಚಿವಾಲಯದ ನಿರ್ಧಾರದಿಂದ ಬಡಜನರು ಮಧ್ಯಮ ವರ್ಗಕ್ಕೆ ಅನುಕೂಲವಾಗಲಿದೆ. ಕರೋನಾ ಪೂರ್ವ ಸಂದರ್ಭದಲ್ಲಿ ಹಿರಿಯ ನಾಗರೀಕರಿಗೆ ಜಾರಿಯಲ್ಲಿದ್ದ ರಿಯಾಯಿತಿ ಟಿಕೆಟ್ ಧರ ಸೌಲಭ್ಯ ರದ್ದಾಗಿದ್ದು, ಅದನ್ನು ಮತ್ತೆ ಮರುಜಾರಿಗೊಳಿಸುವ ಅಗತ್ಯವಿದೆ. ಇದರಿಂದ ದೇಶದ 8ಕೋಟಿ ಹಿರಿಯ ನಾಗರೀಕರಿಗೆ ಅನುಕೂಲವಾಗಲಿದ್ದು, ಚುನಾವಣೆ ನಂತರ ರಚನೆಯಾಗುವ ನೂತನ ಕೇಂದ್ರ ಸರ್ಕಾರ ಈ ನಿಟ್ಟಿನಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಬೇಕೆಂಬುದು ಹಿರಿಯ ನಾಗರೀಕರ ಒತ್ತಾಸೆಯಾಗಿದೆ ಎಂದು ತಿಳಿಸಿದ್ದಾರೆ.

## ಕನಿಷ್ಠ ಬೆಂಬಲದಡಿ ರಾಗಿ, ಜೋಳ ಖರೀದಿ

**ಹಂಪಿ ಟೈಮ್ಸ್ ಬಳ್ಳಾರಿ**

2023–24 ನೇ ಸಾಲಿನಲ್ಲಿ ಬೆಳೆದ ರಾಗಿ ಮತ್ತು ಜೋಳವನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರೈತರಿಂದ ನೇರವಾಗಿ ಖರೀದಿಸಲು ಬಳ್ಳಾರಿ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ತೀರ್ಮಾನಿಸಿದ್ದು, ರಾಜ್ಯದಲ್ಲಿ ಇನ್ನು 3 ಲಕ್ಷ ಮೆ.ಟನ್ ಜೋಳವನ್ನು ಹಾಗೂ 5,99,392 ಮೆ.ಟನ್ ರಾಗಿಯನ್ನು ರೈತರಿಂದ ಖರೀದಿಸಲು ಸರ್ಕಾರ ಮುಂದಾಗಿದೆ. ಖರೀದಿ ಪ್ರಕ್ರಿಯೆಯಲ್ಲಿ ಖರೀದಿ ಮಿತಿಯು ಪ್ರತಿ ರೈತರಿಂದ ಪ್ರತಿ ಎಕರೆಗೆ 10 ಕ್ವಿಂ ನಂತೆ ಗರಿಷ್ಠ 20 ಕ್ವಿಂಟಾಲ್ ಗರಿಷ್ಠ ಮಿತಿ ಇದ್ದು, ಜಿಲ್ಲೆಯ ರೈತರು ನೋಂದಾಯಿಸಿಕೊಳ್ಳಬಹುದು ಎಂದು ಜಿಲ್ಲಾ ಟಾಸ್ಕ್‌ಪೋರ್ಸ್ ಸಮಿತಿಯ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.


Universal Financial Services College Road Parwaz Plaza 2nd Floor Hospet - 583201

WANTED Tele Callers

Female Candidates Only

Freshers Or Experienced

Qualification: PUC, any DEGREE

Preffered Local Hospet Candidates Only.

Working Location-Hosapete

Communication skills required

Contact: 98861 50774



ಇಂಡಸ್ಟ್ರೀಯಲ್ ಶೆಡ್ ಸೈಟ್ ಮಾರಾಟಕ್ಕಿದೆ

ಹೊಸಪೇಟೆ ನಗರದ ಟಿ.ಬಿ.ಡ್ಯಾಂ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಎದುರಿನ ಕೆಎಸ್‌ಎಸ್‌ಐಡಿಸಿ (KSSIDC) ಇಂಡಸ್ಟ್ರೀಯಲ್ ಪ್ರದೇಶದಲ್ಲಿರುವ ಅನ್ನಪೂರ್ಣ ಗ್ರಾನೈಟ್ ಶೆಡ್ ಹಾಗೂ ಖಾಲಿ ಜಾಗ (L-19, R-15 ) ಎರಡು ಸೈಟುಗಳ ಒಟ್ಟು ವಿಸ್ತೀರ್ಣ 10,300 ಚ.ಅಡಿ ಇದ್ದು, ಮಾರಾಟಕ್ಕಿರುತ್ತದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

98441 25317
99861 33299


# ಭಾಷಾ ಅನುವಾದ ಆದಾಯದ ಉದ್ಯೋಗ

## ವಿಮರ್ಶಕ ಡಾ. ಜನಾರ್ದನ್ ಭಟ್ ಹೇಳಿಕೆ | ಭಾಷಾಂತರ ತರಬೇತಿ ಕಮ್ಮಟ ಉದ್ಘಾಟನೆ

**ಹಂಪಿ ಟೈಮ್ಸ್ ಹೊಸಪೇಟೆ**

ಭಾಷೆ–ಭಾಷೆಗಳ ನಡುವೆ ಸಾಂಸ್ಕೃತಿಕ ಕೊಡು–ಕೊಳ್ಳುವಿಕೆ ನಡೆದಿದ್ದು, ವಿದ್ಯಾರ್ಥಿಗಳಿಗೆ ಭಾಷಾಂತರವನ್ನು ಪಠ್ಯಕ್ರಮವಾಗಿ ರೂಪಿಸಬೇಕಾಗಿದೆ. ಭಾಷಾಂತರವನ್ನು ಉನ್ನತ ಶಿಕ್ಷಣದಲ್ಲಿ ಪಠ್ಯವಾಗಿ ಪರಿಚಯಿಸಿದಂತಹ ಮೊಟ್ಟಮೊದಲ ವಿಶ್ವವಿದ್ಯಾಲಯ ಕನ್ನಡ ವಿಶ್ವವಿದ್ಯಾಲಯವಾಗಿದೆ' ಎಂದು ವಿಮರ್ಶಕ ಡಾ. ಜನಾರ್ದನ್ ಭಟ್ ಹೇಳಿದರು.

ಕನ್ನಡ ವಿವಿಯಲ್ಲಿ ಭಾಷಾಂತರ ಕೇಂದ್ರ ಮತ್ತು ಆಂತರಿಕ ಗುಣಮಟ್ಟ ಭರವಸೆ ಕೋಶ(ಐಕ್ಯುಎಸಿ)ವು ಜಂಟಿಯಾಗಿ ಆಯೋಜಿಸಿದ್ದ ಮೂರು ದಿನಗಳ ಭಾಷಾಂತರ ತರಬೇತಿ ಕಮ್ಮಟವನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದರು. ಭಾಷಾಂತರಕಾರರ ಸಮ್ಮೇಳನಗಳ ಮೂಲಕ



ಮಾರ್ಗದರ್ಶನಗಳನ್ನು ಪಡೆದಿರುವುದಾಗಿ ಹಾಗೂ ಅನುವಾದವೆಂಬುದು ಬಹಳ ದೊಡ್ಡ ಆದಾಯ ಬರುವ ಉದ್ಯೋಗವೂ ಆಗಿದೆ ಎಂದು ಹೇಳಿದರು.

ಸಮಾಜ ವಿಜ್ಞಾನ ನಿಕಾಯದ ಡೀನ್ ಡಾ. ಚಲುವರಾಜು ಅಧ್ಯಕ್ಷತೆವಹಿಸಿ ಮಾತನಾಡಿ, ಇಂತಹ ಕಮ್ಮಟಗಳು ನಡೆಯುತ್ತಿರುವುದು ಇಂದಿನ ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕೆ ನಾಂದಿಯಾಗಲಿವೆ. ಪ್ರವಾಸೋದ್ಯಮ ತಾಣವಾದ ಹಂಪಿಯಂತಹ ಸ್ಥಳಗಳಲ್ಲಿ ಬರುವ ದೇಶ–ವಿದೇಶಗಳ ಪ್ರವಾಸಿಗರೊಂದಿಗೆ ಸ್ಥಳೀಯ ಅನಕ್ಷರಸ್ಥ ಜನರೂ ಸಹ ದಿನನಿತ್ಯದ ವಹಿವಾಟುಗಳಿಗಾಗಿ ಬೇರೆ ಬೇರೆ ಭಾಷಿಕರೊಂದಿಗೆ ವ್ಯವಹರಿಸುವುದನ್ನು ಗಮನಿಸಿದರೆ ಭಾಷಾಂತರದ ವ್ಯಾಪ್ತಿ ಎಷ್ಟಿದೆ ಎಂಬುದು ಅರ್ಥವಾಗುತ್ತದೆ ಎಂದು ಹೇಳಿದರು.

ಕಮ್ಮಟದ ನಿರ್ದೇಶಕ ಡಾ.ಎ.ಮೋಹನ ಕುಂಟಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಭಾಷಾಂತರ ಕಮ್ಮಟದ ಔಚಿತ್ಯವನ್ನು ವಿವರಿಸಿ ಕಮ್ಮಟದ ರೂಪುರೇಷೆಗಳನ್ನು ತಿಳಿಸಿದರು. ಸಂಪನ್ಮೂಲ ವಿದ್ವಾಂಸೆ ದೀಪಾ ಬಗಾಡೆ ಇದ್ದರು. ಕಮ್ಮಟದ ಸಂಚಾಲಕಿ ಡಿ.ಪ್ರಭಾ ನಿರ್ವಹಿಸಿದರು.




## ವಚನ ಅರಿವು

### ವಿಶ್ವಾಸ ಬೇಕು

**ಕುರುಡ ಕೈಯ ಕೋಲ ಹಿಂಗಿದಾಗ ಅವ ಅಡಿಯಿಡಬಲ್ಲನೆ?**
**ಮೃಡಭಕ್ತಿಯ ಮಾಡುವಂಗೆ ದೃಢಚಿತ್ತವಿಲ್ಲದಿರ್ದಡೆ**
**ಕಡೆಗಾಣಿಸಬಲ್ಲನೆ?**
**ಇಂತೀ ವಿಶ್ವಾಸದಡಿ ಬೆಚ್ಚಂತಿರಬೇಕು,**
**ನಾರಾಯಣಪ್ರಿಯ ರಾಮನಾಥನಲ್ಲಿ.**

**– ಗುಪ್ತ ಮಂಚಣ್ಣ**

ಕೈಯಲ್ಲಿ ಕೋಲು ಹಿಡಿದು ಸಾಗುವ ಕುರುಡನ ಕೈಯಿಂದ ಕೋಲು ಕೈ ಜಾರಿ ಬಿದ್ದರೆ ಆ ಕುರುಡ ಮುಂದೆ ನಡೆಯಲು ಸಾಧ್ಯವಾಗುವುದಿಲ್ಲ. ಭಕ್ತಿಯ ಮಾಡುವವನು ತನ್ನ ಭಾವದಲ್ಲಿ ಭ್ರಮೆಗಳನ್ನು ಕಳೆದು ನಿರ್ಮೋಹಭಾವದಿಂದ ಲಿಂಗದಲ್ಲಿ ದೃಢಭಕ್ತಿ, ವಿಶ್ವಾಸ, ನಂಬುಗೆಯನ್ನಿಟ್ಟು ಆರಾಧಿಸಿದರೆ ಮುಕ್ತಿಯನ್ನು ನೀಡಿ ಹುಟ್ಟು, ಸಾವುಗಳಿಂದ ಕಡೆಗಾಣಿಸುತ್ತಾನೆ. ಹಾಗಾಗಿ ಶರಣತತ್ವವನ್ನು ಅನುಸರಿಸಿ ಶಿವನಲ್ಲಿ ಭಕ್ತಿ, ವಿಶ್ವಾಸವನಿಟ್ಟು ಸಮಚಿತ್ತದಿಂದ ಆರಾಧಿಸಬೇಕು.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಬೆಳಕಿನ ಹಾದಿ

### ಕೋಪ



■ **ಸುವರ್ಣಾ ಭಟ್ಟ**

"ಮನುಷ್ಯನ ಸಾಮಾನ್ಯ ಗುಣದಲ್ಲಿ ಕೋಪವು ಒಂದು. ಕೋಪ ಬಂದಾಗ ತಾಳ್ಮೆ ವಹಿಸಿದರೆ ನಮ್ಮಿಂದ ತಪ್ಪುಗಳಾಗುವುದು ಬಹಳ ಕಡಿಮೆ. ಅತಿಯಾದ ಸಿಟ್ಟು ಬಂದಾಗ ಹತ್ತರಿಂದ ಒಂದು ಎಣಿಸುವುದು, ಮಾತನಾಡದೆ ಸುಮ್ಮನೆ ಕುಳಿತುಕೊಳ್ಳುವುದರಿಂದಲು ಸಹ ಕೋಪ ಹತೋಟಿಗೆ ಬರುತ್ತದೆ". ಸಿಟ್ಟು ಬಂದಾಗ ನಮ್ಮ ಪ್ರೀತಿ ಪಾತ್ರರರ ಮನಸ್ಸಿಗೆ ನೋವು ಮಾಡಿದರೆ, ಆ ಸಂಬಂಧ ಗೆಳೆತನ ಅಲ್ಲಿಗೆ ಮುಗಿದು ಬಿಡುತ್ತದೆ. ರಾಮು, ಶ್ಯಾಮು, ಕಿರಣ ಮೂವರು ಆತ್ಮೀಯ ಸ್ನೇಹಿತರು.
'ರಾಮನು ಬಹಳ ಸಿಟ್ಟು ಬರುವ ಸ್ವಭಾವ ಹೊಂದಿದ್ದ'. ಮನೆಯಲ್ಲಿ ಆತ ಹೇಳಿದ ತಿಂಡಿಯನ್ನೇ ಮಾಡಿಕೊಡಬೇಕಿತ್ತು. ಇಲ್ಲವಾದರೆ ಮಾಡಿರುವ ತಿಂಡಿಯ ನೆಲದ ಪಾಲು ಮಾಡುತ್ತಿದ್ದ. ಒಂದು ದಿನ ರಾಮನ ತಾಯಿಗೆ ಹುಷಾರಿರಲಿಲ್ಲ. ರಾಮನು ಅಂದು ಇಡ್ಲಿ ಸಾಂಬಾರ್ ಮಾಡಲು ತಿಳಿಸಿದ್ದನು. ಆದರೆ, ಅನಾರೋಗ್ಯದಿಂದ ಬಳಲುತ್ತಿದ್ದ ತಾಯಿ ಅಂದು ಅವಲಕ್ಕಿ ಮಾಡಿದ್ದರು. ಬೆಳಗಿನ ತಿಂಡಿಯ ನೋಡಿ ರಾಮ ಸಿಟ್ಟಾದ. ಯಾರಿಗೂ ತಿಂಡಿ ಸಿಗದಂತೆ ಕಸದ ಬುಟ್ಟಿಗೆ ಚೆಲ್ಲಿದ. ಇದನ್ನು ಗಮನಿಸಿದ ರಾಮನ ತಂದೆ ಆತನ ಹತ್ತಿರ ಕರೆದು ,ನೋಡು ಮಗು ಸಿಟ್ಟು ಒಳ್ಳೆಯದಲ್ಲ. ನೀನು ಇನ್ನೂ ಪ್ರಾಥಮಿಕ ಶಾಲೆಗೆ ಹೋಗುವ ಹುಡುಗ . 'ಜೀವನ ವಿಶಾಲವಾಗಿದೆ ಕಲಿಯುವುದು ಬಹಳ ಇದೆ'. ಸಿಟ್ಟಿನಿಂದ ಮುಂದೆ ಗೆಳೆಯರ ಕಳೆದುಕೊಳ್ಳಬಹುದು. ನಾವು ನಿನ್ನ ಪಾಲಕರು ತಮ್ಮ ಮಗನೆಂದು ನಾವು ಕ್ಷಮಿಸಬಹುದು. ಆದರೆ, ಎಲ್ಲರೂ ನಿನ್ನ ಕ್ಷಮಿಸಲಾರರು" ನಿನ್ನ ಅಮ್ಮನಿಗೆ ಮೈ ಹುಷಾರಿಲ್ಲ ಆದರೂ ಮಗ ಹಸಿದುಕೊಂಡು ಕೂರಬಾರದೆಂದು ತಿಂಡಿ ಮಾಡಿದ್ದರು. ನೀನು ಹಾಳು ಮಾಡಿದೆ. "ಕೋಪದಲ್ಲಿ ಕೊಯ್ದುಕೊಂಡ ಮೂಗು ಶಾಂತವಾದ ಮೇಲೆ ಮತ್ತೆ ಬರಲು ಸಾಧ್ಯವಿಲ್ಲ.
ನಮ್ಮ ಸಿಟ್ಟಿನಿಂದ ಒಬ್ಬರ ಕಳೆದುಕೊಂಡರೆ ಅವರು ಮತ್ತೆ ನಮಗೆ ಸಿಗಲಾರರು. ನಾವು ಒಳ್ಳೆಯ ಗೆಳೆಯರನ್ನು ಕಳೆದುಕೊಂಡು ದುಃಖ ಪಡಬೇಕು. ಒಂದು ನಿಮಿಷದ 'ಕೋಪ' ಶಾಶ್ವತ ಸಂಬಂಧ ಹಾಳು ಮಾಡುತ್ತದೆ.
ಶಾಲೆಯಲ್ಲಿ ಗೆಳೆಯರಿಗೆ ತಾನು ಹೇಳಿದಂತೆ ಕೇಳಬೇಕು ಎಂದು ಹೆದರಿಸದಿರು. ಅವರ ಮೇಲೆ ಸಿಟ್ಟಾಗದಿರು. ಪ್ರೀತಿ ನೀಡಿದರೆ ಅವರು ನಿನ್ನ ಜೊತೆ ಇರುವರು. ನೀನು ಸಿಟ್ಟು ಮಾಡಿಕೊಂಡರೆ ಒಂದು ದಿನ ಶಾಶ್ವತವಾಗಿ ನಿನ್ನ ಗೆಳೆತನ ಬಿಡುವರು ಎಂದರು.
ರಾಮನಿಗೆ ಅಪ್ಪನ ಮಾತು ಸರಿ ಎನಿಸಿತು. ತಂದೆ ತಾಯಿಯ ಹತ್ತಿರ ಕ್ಷಮೆ ಕೇಳಿದ. ಮುಂದೆ ಗೆಳೆಯರ ಜೊತೆ ಪ್ರೀತಿಯಿಂದ ನಡೆದುಕೊಂಡ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.
**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com M: 9448633038

# ಮೂಕ ಪೃಥ್ವಿಗೆ ಮಾತು ಕೊಟ್ಟ ಕಿಶೋರಿ ಗ್ರೇತಾ ಥನ್‌ಬರ್ಗ್

ಮಕ್ಕಳ ಪರೀಕ್ಷೆಗಳು ಮುಗಿಯುತ್ತಾ ಬಂದಿವೆ. ರಜೆಯಲ್ಲಿ ಮಕ್ಕಳಿಗೆ ಓದಿನ ರುಚಿ ಹತ್ತಿಸುವುದು ದೊಡ್ಡವರ ಜವಾಬ್ದಾರಿಯಾಗಿದೆ. ಓದು ಮಕ್ಕಳ ಬದುಕಿಗೆ ಮನೋರಂಜನೆ ಹಾಗೂ ಹೊಸ ವಿಷಯಗಳ ಜೊತೆಗೆ ಮತ್ತು ಸ್ಫೂರ್ತಿಯನ್ನು ನೀಡುವಂತಾದರೆ ಅದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೆಲವು ಮಹತ್ತರ ಪುಸ್ತಕಗಳನ್ನು ಪರಿಚಯಿಸುವ ಆಶಯದಲ್ಲಿ ಈ ಲೇಖನ.

"ಅಧಿಕಾರದ ಸ್ಥಾನದಲ್ಲಿದ್ದೂ ಜವಾಬ್ದಾರಿಯಿಂದ ನಡೆದುಕೊಳ್ಳದಿರುವವರಿಗೊಂದು ಅಂತಿಮ ಕಿವಿಮಾತು. ಜನಪ್ರಿಯತೆ ಕಳೆದುಕೊಳ್ಳೀರೆಂದು ಹೆದರುತ್ತಿದ್ದೀರಾ? ನಿಮ್ಮ ಹಿತಾಸಕ್ತಿಗಳು ಕಳೆದುಹೋಗಬಹುದೆಂದು ಭಯವೇ? ಜಾಗತಿಕ ಹವಾಮಾನ, ಜೀವಂತ ಭೂಮಿಯ ವಾತಾವರಣದ ಕುರಿತಾದ ನ್ಯಾಯಕ್ಕಾಗಿ ನಾನಿಲ್ಲಿಗೆ ಬಂದಿದ್ದೇನೆ. ಕೆಲವೇ ಜನರ ಮೋಜಿಗಾಗಿ, ಲಾಭಕ್ಕಾಗಿ ಮತ್ತು ಲಾಲಸೆಗಾಗಿ ಇಡಿ ನಾಗರಿಕತೆಯನ್ನು ಮತ್ತು ಸಮಸ್ತ ಜೀವ ಸಂಕುಲವನ್ನು ಬಲಿ ಕೊಡುತ್ತಿದ್ದೀರಿ. ನಮ್ಮಿಡೀ ಜೀವಜಾಲವನ್ನು ಲೂಟಿ ಮಾಡುತ್ತಿದ್ದೀರಿ. ನೀವು ನಿಮ್ಮ ಜವಾಬ್ದಾರಿಯಿಂದ ನುಣುಚಿಕೊಂಡು, ಆ ಹೊಣೆಯನ್ನು ನಮ್ಮಂಥಹ ಎಳೆಯರ ಮೇಲೆ ಹೊರಿಸಿದ್ದೀರಿ....." ವಿಶ್ವಸಂಸ್ಥೆಯಲ್ಲಿ ನಿಂತು, ಹೀಗೆ ಹಿರಿಯರೆಲ್ಲರೂ ನಾಚಿ ತಲೆತಗ್ಗಿಸುವಂತೆ ಗಟ್ಟಿಯಾಗಿ ಮಾತನಾಡಿದ್ದು ಹದಿನಾರು ವರ್ಷದ ಸ್ವೀಡನ್ನಿನ ಬಾಲೆ ಗ್ರೇಟಾ ಥನ್‌ಬರ್ಗ್.

ಸ್ವೀಡನ್ನಿನ ಶಾಲಾ ಬಾಲಕಿ ಗ್ರೇತಾ ಥನ್‌ಬರ್ಗ್ ದೊಡ್ಡ ದೊಡ್ಡವರೆಲ್ಲ ಪ್ರಶ್ನೆ ಮಾಡುವ ಹಂತಕ್ಕೆ ಬೆಳೆದು ನಿಂತಿದ್ದಾಳೆ. ಭವಿಷ್ಯದ ಮಕ್ಕಳ ಪ್ರತಿನಿಧಿಯಾಗಿರುವ ಆಕೆ "ನಮ್ಮ ಭವಿಷ್ಯದ ಚೆಲ್ಲಾಟವಾಡಲು ನಿಮಗೆಷ್ಟು ಧೈರ್ಯ? ಎಂದು ದೊಡ್ಡವರನ್ನು ಪ್ರಶ್ನೆ ಮಾಡುತ್ತಿದ್ದಾಳೆ. ಪರಿಸರದ ಕುರಿತಾಗಿ ನಮಗೆ ಪಾಠ ಮಾಡುತ್ತೀರಿ, ನಮ್ಮನ್ನು ನಾಡಿನ ಆಶಾಕಿರಣ ಎಂದು ಹಾಡಿ ಹೋಗಳುತ್ತಿದ್ದಿರಿ. ಆದರೆ ಅಂತಹ ಪೊಳ್ಳು ಮಾತುಗಳಿಂದ ನಮ್ಮನ್ನು ಹಾಗೂ ನಮ್ಮ ಕನಸುಗಳನ್ನು ನಾಶ ಮಾಡುತ್ತಿದ್ದೀರಿ. ಇಂದು ಜನರು ತುಂಬಾ ಸಂಕಷ್ಟದಲ್ಲಿದ್ದಾರೆ. ಪರಿಸರದ ಜೀವಜಾಲ ಅತಂತ್ರವಾಗಿದೆ. ಜೀವಲೋಕ ಯುಗಾಂತ್ಯದತ್ತ ವಾಲುತ್ತಿದೆ ಎನ್ನುವುದು ನನ್ನನ್ನು ಕಾಡುತ್ತಿದೆ. ಪ್ರೀತಿಯ ನೆಪದಲ್ಲಿ ಏನೇನೋ ಕನಸುಗಳನ್ನು ಕಟ್ಟಿದ್ದೀರಿ. ಕಳೆದ 30 ವರ್ಷಗಳಿಂದ ವಿಜ್ಞಾನಿಗಳು, ಪರಿಸರ ತಜ್ಞರು ನಮ್ಮ ಪರಿಸರದ ಬಗ್ಗೆ ಸಾಕಷ್ಟು ಎಚ್ಚರಿಕೆ ನೀಡುತ್ತಿದ್ದಾರೆ. ಆದರೆ ಯಾರು ಅದನ್ನು ಕೇಳಿಸಿಕೊಳ್ಳುತ್ತಿಲ್ಲ. ಹೀಗಾದರೆ ಮುಂದಿನ ಭವಿಷ್ಯವೇನು? ಮಕ್ಕಳ ಭವಿಷ್ಯವನ್ನು ನೀವು ವಂಚಿಸುತ್ತಿದ್ದೀರಿ. ನಿಮ್ಮಗಳ ಕಪಟ ಮೋಸವನ್ನು ಎಳೆಯರಾದ ನಾವು ಅರ್ಥಮಾಡಿಕೊಂಡಿದ್ದೇವೆ. ಮುಂದಿನ ಪೀಳಿಗೆಯ ಎಲ್ಲರ ದೃಷ್ಟಿ ನಿಮ್ಮ ಮೇಲಿದೆ. ಇದೇ ರೀತಿ ತಾವು ಸಾಗಿದರೆ ನಾವು ನಿಮ್ಮನ್ನು ಕ್ಷಮಿಸಲಾರೆವು" ಎನ್ನುತ್ತಾಳೆ. ಥನ್‌ಬರ್ಗ್‌ಳಂತೆ ನಮ್ಮ ಎಲ್ಲಾ ಎಳೆಯರು ಒಗ್ಗೂಡಿ ಧ್ವನಿ ಗಟ್ಟಿ ಮಾಡಿದರೆ ದೊಡ್ಡವರೆಲ್ಲರೂ ಅವರ ಮುಂದೆ ತಲೆ ಎತ್ತುವುದು ಖಂಡಿತವಾಗಿಯೂ ಕಷ್ಟವಾಗುತ್ತದೆ.

ಸ್ವೀಡನ್ನಿನ ಗ್ರೇಟಾ ಥನ್‌ಬರ್ಗ್‌ಳ ಬದುಕು, ಪರಿಸರದೆಡೆಗಿನ ಅವಳ ಹೋರಾಟದ ಪ್ರತಿಯೊಂದು ಘಟ್ಟ, ಅವಳ ಹಠಮಾರಿತನ, ಧೀಮಂತಿಕೆ ಮತ್ತು ಎಲ್ಲಕ್ಕೂ ಮುಖ್ಯವಾಗಿ ಅವಳ ಭೂಮಿಯೆಡೆಗಿನ ತೀವ್ರತೆಯನ್ನು ಅತ್ಯಂತ ನವಿರಾಗಿ ಮತ್ತು ಸೂಕ್ಷ್ಮತೆಯಿಂದ, ಕನ್ನಡದ ಪ್ರಸಿದ್ಧ ವಿಜ್ಞಾನ ಮತ್ತು ಪರಿಸರ ಬರಹಗಾರರಾದ ನಾಗೇಶ್ ಹೆಗಡೆಯವರು ಕನ್ನಡದಲ್ಲಿ "ಮೂಕ ಪೃಥ್ವಿಗೆ ಮಾತು ಕೊಟ್ಟ ಕಿಶೋರಿ– ಗ್ರೇತಾ ಥನ್‌ಬರ್ಗ್' ಕೃತಿಯಲ್ಲಿ ಅತ್ಯಂತ ಆಪ್ತವಾಗಿ ಕಟ್ಟಿಕೊಟ್ಟಿದ್ದಾರೆ.



ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹಗರಿಬೊಮ್ಮನಹಳ್ಳಿ

Scan For Digital Colourful
HAMPI TIMES E-paper

ಈ ಪುಸ್ತಕಕ್ಕೆ ಚಿಂತಕರೂ, ಸಾಹಿತಿಗಳೂ ಆದ ದೇವನೂರ ಮಹಾದೇವ ಅವರು ಮುನ್ನುಡಿ ಬರೆಯುತ್ತಾ, ಭೂಮಿ ತಾಯಿಯೇ ಗ್ರೇಟಾ ಥನ್‌ಬರ್ಗ್‌ಳ ಮೈಮೇಲೆ ಬಂದು ನುಡಿಸಿದಂತೆ ಆಕೆ ಮಾತನಾಡುತ್ತಿದ್ದಾಳೆ". ಅಮೇರಿಕಾದ ರೆಡ್ ಇಂಡಿಯನ್ ಮೂಲ ನಿವಾಸಿಗಳ ಆಧ್ಯಾತ್ಮ ಗುರು ತಮ್ಮ ಸಂಪ್ರದಾಯದಂತೆ ಗ್ರೇಟಾಗೆ ಹೊಸ ಹೆಸರು ಇಡುವಾಗ ಜಗತ್ತನ್ನು ನಿದ್ದೆಯಿಂದ ಎಬ್ಬಿಸಲು ಧರೆಗಿಳಿದ ಬಂದಿದ್ದಾಳೆ 'ನೀನು ಧರೆಗಿಳಿದ ದೇವತೆ'ಎಂದು ಕರೆದಿದ್ದಾರೆ. ಇಂದಿನ ಮಕ್ಕಳು ಮನಸ್ಸು ಮಾಡಿದರೆ ಏನೆಲ್ಲಾ ಸಾಧಿಸಬಹುದು ಎಂಬುದಕ್ಕೆ ಗ್ರೇಟಾ ಥನ್‌ಬರ್ಗ್ ಜೀವಂತ ದಂತ ಕತೆಯಾಗಿದ್ದಾಳೆ.

ಇಂದು ಇಡೀ ವಿಶ್ವ ನಿಜಕ್ಕೂ ಹವಾಮಾನ ವಿಪತ್ತು ತುರ್ತುಪರಿಸ್ಥಿತಿ ಘೋಷಣೆಯ ಸಂದರ್ಭಕ್ಕೆ ಬಂದು ನಿಂತಿದೆ. ಭೂಮಿಯ ಜ್ವರವನ್ನು ನಾವು ಮನುಷ್ಯರು ದಿನದಿಂದ ದಿನಕ್ಕೆ ಏರಿಸುತ್ತಿದ್ದೇವೆ. ಇದಕ್ಕೆ ನಾವು ಅತಿ ಹೆಚ್ಚಾಗಿ ಇಂಧನ ಉರಿಸುತ್ತಿರುವುದೇ ಕಾರಣ! ಇಡೀ ಜಗತ್ತೇ ಇಂದು ಫಾಸಿಲ್ ಇಂಧನಗಳ ಬಿಗಿ ಮುಷ್ಟಿಯಲ್ಲಿ ನಿಂತಿದೆ. ಜೊತೆಗೆ




ಕಾಡು ಕಡಿದು, ನದಿ ಬತ್ತಿಸಿ, ಅಭಿವೃದ್ಧಿಯ ಹೆಸರಲ್ಲಿ ಎಲ್ಲೆಂದರಲ್ಲಿ ಮರಗಳನ್ನು ಕಡಿದು, ಅವೈಜ್ಞಾನಿಕ ಕೃಷಿ ಪದ್ಧತಿ ಅನುಸರಿಸಿ, ಆಸ್ಟ್ರೇಲಿಯಾ ಖಂಡದ ವಿಸ್ತೀರ್ಣದಷ್ಟು ದೊಡ್ಡ ಪ್ಲಾಸ್ಟಿಕ್ ಕಸದ ನಡುಗಡ್ಡೆಯನ್ನು ಶಾಂತ ಮಹಾಸಾಗರದಲ್ಲಿ ತೇಲಿ ಬಿಟ್ಟು.... ನಾವು ಮನುಷ್ಯರು ಮಾಡಿದ್ದು.. ಮಾಡುತ್ತಿರುವುದು... ಕರ್ಮಕಾಂಡ ಒಂದೇ ಎರಡೇ! ಜಗತ್ತಿನ ಇದುವರೆಗಿನ ಯಾವ ರಾಜಕೀಯ ಪಕ್ಷವೂ ಪ್ರಕೃತಿಯ ಮೇಲೆ ನಡೆಯುತ್ತಿರುವ ಈ ಎಲ್ಲ ಭಯಾನಕ ಅತ್ಯಾಚಾರದ ಕಡೆಗೆ ಗಮನ ಹರಿಸಿಲ್ಲ ಮತ್ತು ಹರಿಸುತ್ತಿಲ್ಲವೆಂಬುದೇ ಸಂಕಟವನ್ನು ಇನ್ನಷ್ಟು ಹೆಚ್ಚಿಸುತ್ತಿದೆ. ವಾಸ್ತವ ಅತ್ಯಂತ ಭೀಕರವಾಗಿದೆ. ನಿರಾಶಾದಾಯಕವಾಗಿದೆ.

ಪರಿಸರ ಮಾತೆಯ ಅಳಲು ಪುಟ್ಟ ಬಾಲೆಯ ಹೃದಯಕ್ಕೆ ತಟ್ಟುತ್ತದೆ. ಹಾಗಾಗಿ 16 ವರ್ಷದವಳಾಗಿದ್ದಲೇ ಈ ಪುಟ್ಟ ಬಾಲೆ 'ನಾಳೆ ನನಗೆ ಭವಿಷ್ಯವಿಲ್ಲ ಆದುದರಿಂದ ನಾನು ಶಾಲೆಗೇ ಹೋಗುವುದಿಲ್ಲ' ಎಂದು 2018ರ ಆಗಸ್ಟ್ 20ರ ಶುಕ್ರವಾರ, ಶಾಲೆಗೆ ಚಕ್ಕರ್ ಹೊಡೆದು ಸ್ವೀಡನ್‌ನ ಪಾರ್ಲಿಮೆಂಟಿನ ಎದುರಿಗೆ ಕುಳಿತು 'ಶಾಲಾ ಮುಷ್ಕರ' ಪ್ರಾರಂಭಿಸಿದ್ದು, ದೊಡ್ಡ ಚಳವಳಿಗೆ ಕಾರಣವಾಗುತ್ತದೆಂಬುದು ಸ್ವತಃ ಗ್ರೇಟಾಳಿಗೇ ತಿಳಿದಿರಲಿಲ್ಲ. ಇವಳು ಶಾಲೆಗೆ ಹೋಗದಿದ್ದರೆ ಅವಳ ವಿದ್ಯಾಭ್ಯಾಸದ ಗತಿಯೇನು? ಎಂದು ಕೆಲವರು ಆತಂಕದಿಂದ, ಕುತೂಹಲದಿಂದ ವಿಚಾರಿಸಿದರು. "ಶಿಕ್ಷಣವನ್ನು ಪುಸ್ತಕಗಳಿಂದಲೂ ಪಡೆಯಬಹುದು. ಆದರೆ ನಮ್ಮಂತಹ ಮಕ್ಕಳಿಗೆ ಭವಿಷ್ಯವೇ ಇಲ್ಲದಂತಾಗಿದೆ, ಹವಾಮಾನ ವೈಪರಿತ್ಯ, ಕಾಡ್ಗಿಚ್ಚು, ಅರಣ್ಯ ನಾಶದ ಬಗ್ಗೆ ವಿಜ್ಞಾನಿಗಳು ಎಚ್ಚರಿಸುತ್ತಲೇ ಇದ್ದರೂ ಅವುಗಳ ಬಗ್ಗೆ ವಿಶ್ವದ ಯಾವ ಸರ್ಕಾರಗಳೂ ಗಮನಹರಿಸದಿರುವಾಗ ನಾವು ಶಾಲೆಯಲ್ಲಿ ವಿದ್ಯಾಭ್ಯಾಸ ಪಡೆದೇನು ಪ್ರಯೋಜನ?" ಎಂಬ ಮುಖಕ್ಕೆ ಹೊಡೆದಂತಾ ಅವಳ ಪ್ರಶ್ನೆಗೆ ಯಾರ ಬಳಿಯೂ ಉತ್ತರವಿಲ್ಲ. "ನನ್ನನ್ನು ತಿದ್ದಲು ಬರಬೇಡಿ ಆ ನಾಯಕರನ್ನು ತಿದ್ದಿ" ಎನ್ನುವ ಗ್ರೇಟಾ ಮಾತು ಕಟುವಾದರೂ ಅದೆಷ್ಟೊಂದು ಸತ್ಯವಿದೇ? ಎಂದೆನಿಸುತ್ತದೆ.

ಮೊದಲಿಗೆ ಪ್ರತಿ ಶುಕ್ರವಾರ ಪಾರ್ಲಿಮೆಂಟಿನ ರಸ್ತೆ ನಡುವೆ ನಿಂತು ಅಧಿಕಾರಸ್ಥರಿಗೆ ಕರಪತ್ರಗಳನ್ನು ನೀಡಿ, 'ಈ ಭೂಮಿಯನ್ನು ಉಳಿಸಿಕೊಳ್ಳಲು ಏನಾದರೂ ಮಾಡಿ' ಎಂದು ಮನಕರಗುವಂತೆ ಅಂಗಲಾಚುತ್ತಾಳೆ. ಕೆಲವೇ ದಿನಗಳಲ್ಲಿ ಅವಳೊಡನೆ ಅವಳ ಕೆಲ ಸಂಗಡಿಗರೂ ಸೇರಿಕೊಂಡು ಪ್ರತೀ ಶುಕ್ರವಾರ ಅವರೆಲ್ಲರೂ ತರಗತಿಗಳನ್ನು ಬಹಿಷ್ಕರಿಸಿ ಬೀದಿಗೆ ಇಳಿದರು. ಏಕಾಂಗಿಯಾಗಿ 'ಫ್ರೈಡೇಸ್ ಫಾರ್ ಫ್ಯೂಚರ್' ಆಂದೋಲನ ಪ್ರಾರಂಭಿಸಿದ ಅವಳ ಜೊತೆ "ಸೇವ್ ಅವರ್ ಅರ್ಥ್" ಎಂಬ ಘೋಷಣೆಯೊಂದಿಗೆ ಜಗತ್ತಿನ 300ಕ್ಕೂ ಹೆಚ್ಚು ನಗರಗಳ ಪರಿಸರ ಪ್ರೇಮಿಗಳು ಜೊತೆಗೂಡಿ 'ಕ್ಲೈಮೇಟ್‌ಗಾಗಿ ಮುಷ್ಕರ' ಚಳವಳಿಯನ್ನು ವ್ಯಾಪಕಗೊಳಿಸಿದರು. ಗ್ರೇಟಾ ಮಾತಿಗೆ ಮನ್ನಣೆ ನೀಡಿರುವ ವಿಶ್ವವಿಖ್ಯಾತ 'ದಿ ಗಾರ್ಡಿಯನ್' ಪತ್ರಿಕೆ ಹವಾಮಾನ ವೈಪರಿತ್ಯದ ತುರ್ತನ್ನು ಗಮನಿಸಿ, ಇನ್ನು ಮುಂದೆ ತಾನು 'ಗ್ಲೋಬಲ್ ವಾರ್ಮಿಂಗ್' ಎಂಬ ಪದ ಬಳಸುವುದಿಲ್ಲ ಬದಲಿಗೆ 'ಗ್ಲೋಬಲ್ ಹೀಟಿಂಗ್' ಅಂದರೆ 'ಭೂಮಿ ಬೆಚ್ಚಗೆ' ಅಲ್ಲ, 'ಭೂಮಿ ಸುಡು' ಎಂಬ ಪದ ಬಳಸುವುದಾಗಿ ಮತ್ತು 'ಕ್ಲೈಮೆಟ್ ಚೇಂಜ್' ಬದಲಿಗೆ 'ಕ್ಲೈಮೆಟ್ ಕ್ರೈಸಿಸ್' ಎಂದು, ಅಂದರೆ 'ವಾತಾವರಣ ಬದಲಾವಣೆ' ಅಲ್ಲ 'ವಾತಾವರಣದ ವಿಷಮ ಸ್ಥಿತಿ' ಎಂದು ಬಳಸುವುದಾಗಿ ಹೇಳಿರುವುದು ಆಕೆಯ ಹೋರಾಟಕ್ಕೆ ಸಿಕ್ಕ ಪ್ರತಿಫಲ ಎನ್ನಬಹುದು.

ವಿಶ್ವದ ಸಾವಿರಾರು ವಿಜ್ಞಾನಿಗಳು, ವಿಚಾರವಂತರು, ಬುದ್ಧಿಜೀವಿಗಳು, ಸೆಲೆಬ್ರೆಟಿಗಳು, ಪರಿಸರಾಸಕ್ತರು ಮತ್ತು ಕಾಲೇಜು ವಿದ್ಯಾರ್ಥಿಗಳು ಈ ಪುಟ್ಟ ಮಕ್ಕಳ ಆಕೆಯ ಜೊತೆ ಕೈ ಜೋಡಿಸಿದರು. ಈ ಆಂದೋಲನದ ತೀವ್ರತೆಗೆ ಜಗತ್ತಿನ ಬಲಾಢ್ಯ ದೇಶಗಳು, ವಿಶ್ವ ನಾಯಕರುಗಳು ತಮ್ಮ ಬೇಜವಾಬ್ದಾರಿ ನಿದ್ರೆಯಿಂದ ಗಡಬಡಿಸಿ ಎಳುವಂತಾಯಿತು. 2019ರ ಮಾರ್ಚ್ 15 ರಂದು ಜಗತ್ತಿನ ಅನೇಕ ದೇಶಗಳ ಮಕ್ಕಳೂ ಸೇರಿ, "ಜಾಗತಿಕ ಶಾಲಾ ಮುಷ್ಕರ" ನಡೆಸಿದರು. ಹಿರಿಯರೊಡಗೂಡಿ "ಜಾಗತಿಕ ಹವಾಮಾನ ಆಪತ್ತು ಘೋಷಣೆ" ಮಾಡಬೇಕೆಂದು ವಿಶ್ವ ಸಮುದಾಯವನ್ನು ಒತ್ತಾಯಿಸಿದರು. ಹಾಸನದಲ್ಲಿಯೂ ನೂರಾರು ಮಕ್ಕಳೊಡಗೂಡಿ ಅನೇಕ ಪರಿಸರಾಸಕ್ತರು, ಗೆಳೆಯರ ಬಳಗ ಹಾಗೂ ಹಸಿರುಭೂಮಿ ಪ್ರತಿಷ್ಠಾನದ ನೇತೃತ್ವದಲ್ಲಿ ಗ್ರೇಟಾ ಪ್ರಾರಂಭಿಸಿದ ಈ ಆಂದೋಲನಕ್ಕೆ ಕೈ ಜೋಡಿಸಿದ್ದರು ಎಂಬುದು ಹೆಮ್ಮೆಯ ವಿಚಾರವಾಗಿದೆ.

ಗ್ರೇಟಾಳ ತಳಮಳದ ಮಾತು, ಒಡಲನ್ನು ಸುಡುತ್ತಿದೆ. ಭೂಮಿಯನ್ನೇ ತಾನು ಆವಾಹಿಸಿಕೊಂಡಂತೆ ಆಡುವ ಅವಳ ಮಾತುಗಳು ಹೃದಯಕ್ಕಿರಿವ ಭರ್ಜಿ! – "ನೀವು ನಿಮ್ಮ ಮಕ್ಕಳನ್ನು ಎಲ್ಲಕ್ಕೂ ಮಿಗಿಲಾಗಿ ಪ್ರೀತಿಸುವಿರಾದರೆ, ಅವರ ಕಣ್ಣೆದುರೇ ಅವರ ಭವಿಷ್ಯಕ್ಕೆ ನೀವೇ ಬೆಂಕಿ ಇಡುತ್ತಿರಲಿಲ್ಲ. ಇನ್ನಾದರೂ ಭೂಮಿ ಉಳಿಸಲು, ಮಾಡಲೇಬೇಕಾದ್ದನ್ನು ಈ ಕೂಡಲೇ ಮಾಡದಿದ್ದಲ್ಲಿ ನಿಮ್ಮಲ್ಲಿ ನಮಗೆ ಯಾವ ರೀತಿಯ ಭರವಸೆ, ವಿಶ್ವಾಸ ಮತ್ತು ನಂಬಿಕೆ ಉಳಿಯಲಾರದು. ನಾನು ನನ್ನ ಎಪ್ಪತ್ತೈದನೇ ಜನ್ಮದಿನ ಆಚರಿಸಿಕೊಳ್ಳುವ ಸಂದರ್ಭದಲ್ಲಿ ಆಗ ನನಗೂ ಮಕ್ಕಳಿದ್ದಲ್ಲಿ, ಆಗ ಅವರು ನನ್ನ ಬಳಿ ನಿಮ್ಮ ಬಗ್ಗೆ ಕೇಳಬಹುದು. ಹವಾಮಾನ ವೈಪರೀತ್ಯದ ಕುರಿತು ನೀವೇಕೆ ಏನನ್ನೂ ಮಾಡಲಿಲ್ಲ? ಎಂದು ಆಕ್ಷೇಪಿಸಬಹುದು. ಏನನ್ನಾದರೂ ಮಾಡಲೇಬೇಕಿದ್ದ ಸಂದರ್ಭದಲ್ಲಿ ನೀವು ಕೆಲಸಕ್ಕೆಬಾರದ ವಿಚಾರಗಳಲ್ಲೇ ಕಾಲ ಹಾಕಿದಿರಿ, ನಮ್ಮನ್ನು ಇನ್ನಷ್ಟು ಸಂಕಷ್ಟಕ್ಕೆ ತಳ್ಳಿದಿರಿ. ವಿವೇಕದ ಕಾರ್ಯ ಮಾಡಬೇಕಾಗಿದ್ದ ನೀವು, ಅಸಂಬದ್ಧತೆಯಿಂದ ವರ್ತಿಸಿದಿರಿ. ಈಗಿನ ವ್ಯವಸ್ಥೆಯಲ್ಲಿ ಪರಿಹಾರ ಕಂಡುಕೊಳ್ಳಲು ಆಗದಿದ್ದಲ್ಲಿ, ಈಗಿನ ವ್ಯವಸ್ಥೆಯನ್ನೇ ಆಮೂಲಾಗ್ರವಾಗಿ ಬದಲಿಸಲೇಬೇಕಾಗಿದೆ. ನೀವು ಇದುವರೆವಿಗೂ ನಮ್ಮ ಆಲೋಚನೆಗಳನ್ನು ತಿರಸ್ಕರಿಸಿದ್ದೀರಿ ಮತ್ತು ಮುಂದೆಯೂ ನಿರ್ಲಕ್ಷಿಸುತ್ತೀರಿ. ನಿಮಗೆ ನಿಮ್ಮ ಜವಾಬ್ದಾರಿಯನ್ನು ನೆನಪಿಸುತ್ತಿದ್ದೇವೆ. ನೀವು ಹೀಗೇ ಕಾಲತಳ್ಳಲು ನೆಪಗಳು ಉಳಿದಿಲ್ಲ. ಹಾಗೆಯೇ ನಮಗೂ ಇನ್ನು ಕಾಯಲು ಸಮಯವಿಲ್ಲ. ನಾವೆಲ್ಲರೂ ಕೈ ಜೋಡಿಸಿ ಏನು ಮಾಡಲು ಸಾಧ್ಯ ಎಂಬುದನ್ನು ಇನ್ನಾದರೂ ಖಚಿತವಾಗಿ ಮತ್ತು ಸ್ಪಷ್ಟವಾಗಿ ಮಾತನಾಡಬೇಕಿದೆ. ಅದು ಎಷ್ಟೇ ಕಠಿಣವಾಗಿದ್ದರೂ ಪರವಾಗಿಲ್ಲ. ನಿಜವಾದ ಅಧಿಕಾರ ಜನರಿಗೆ ಸೇರಿದ್ದು, ಅಂದರೆ ನಮ್ಮಂಥಹ ಸಾಮಾನ್ಯರಿಗೆ ಸೇರಿದ್ದು!"

'ಅಬ್ಬಾ!' ಹಿರಿಯರೇ ನೀವೆಲ್ಲ ಸೇರಿ ನಮ್ಮ ಭವಿಷ್ಯ ನಾಶ ಮಾಡಿದ್ದೀರಿ' ಎಂದು ತುಂಬಿದ ಸಭೆಗಳಲ್ಲಿ ನಿಂತು ಗಟ್ಟಿಸಿ ಹೇಳಲು ಎಂತಹ ಎಂಟೆದೆ ಬೇಕು! ಗ್ರೇಟಾಳಲ್ಲಿ ತರ್ಕವಿದೆ. ವಿಷಯದ ಕುರಿತು ಆಳ ಜ್ಞಾನವಿದೆ. ರಾಜಕೀಯ ಪ್ರಜ್ಞೆ ಇದೆ. ಭೂಮಿಯ ಸಕಲ ಚರಾಚರಗಳ ಬಗ್ಗೆ ಅಪಾರ ಕಾಳಜಿ ಇದೆ. ಎಲ್ಲಕ್ಕಿಂತಾ ಮುಖ್ಯವಾಗಿ ಅವಳ ಒಳಗೊಳ್ಳುವಿಕೆ, ಧಾರಣಶಕ್ತಿ ಮತ್ತು ತೀವ್ರತೆ ಇದೆಯಲ್ಲಾ, ಅದು ನಮ್ಮೊಳಗೆ ಇಳಿದು ಬಡಿದೆಬ್ಬಿಸಿಬಿಡುತ್ತದೆ! ನಿಜವಾಗಿ ಆತ್ಮಸಾಕ್ಷಿ ಇರುವವರಿಗೆ ನಾವೆಷ್ಟು ಕ್ಷುದ್ರರು ಎಂದು ವ್ಯಥೆಪಡುವಂತಾಗುತ್ತದೆ. "ನಾನು ಪ್ರತಿ ದಿನ ಅನುಭವಿಸುವ ಭಯ, ನಿಮ್ಮನ್ನೂ ಕೂಡ ಭೀತರಾಗಿಸಬೇಕು. ತೀವ್ರ ಸಂಕಟ ಬಂದಾಗ ಏನೇನು ತುರ್ತು ಕ್ರಮ ಕೈಗೊಳ್ಳುವಿರೋ ಅದನ್ನೆಲ್ಲಾ ಈಗಲೇ ಕೈಗೊಳ್ಳಬೇಕಿದೆ, ಏಕೆಂದರೆ ನಮ್ಮ ಭೂಮಿಯೆಂಬ 'ಮನೆಗೆ ಬೆಂಕಿ ಬಿದ್ದಿದೆ.' ವಿಜ್ಞಾನವನ್ನಷ್ಟೇ ನಂಬೋಣ, ವಿಜ್ಞಾನಿಗಳ ಮಾತನ್ನಷ್ಟೇ ಕೇಳೋಣ. ಪರಿಸರ ವಿಜ್ಞಾನಕ್ಕೆ ವಿಜ್ಞಾನವಷ್ಟೇ ಆಧಾರ". ಎನ್ನುತ್ತಾ ಕೆಲವೊಮ್ಮೆ ಸರಳವಾಗಿ, ಶಾಂತವಾಗಿ ಇನ್ನೂ ಕೆಲವೊಮ್ಮೆ ಕೋಪದಿಂದ, ಮತ್ತೊಮ್ಮೆ ಆಕ್ರೋಶದಿಂದ ನುಡಿಯುತ್ತಿರುವ ಈ ಪುಟ್ಟ ಬಾಲೆಯ ನಿಷ್ಠುರ ಮಾತುಗಳು ಇನ್ನಾದರೂ ಜಗತ್ತಿನ ಎಲ್ಲ ಸರ್ಕಾರಗಳನ್ನೂ ಬಡಿದೆಬ್ಬಿಸಲೇಬೇಕಿದೆ. ಭೂಮಿಯುಳಿಸಲು ಎಲ್ಲರೂ ಪಣ ತೊಡಲೇಬೇಕಿದೆ. ಏಕೆಂದರೆ ಈಗಾಗಲೇ ತಡವಾಗಿದೆ! ಜೊತೆಗೆ ನಾವು ಭೂಮಿಯುಳಿವಿಗೆ ಪೂರಕವಾದ ಹೆಜ್ಜೆ ಇಡದಿದ್ದರೆ, ಭೂಮಿಯೇ ನಮ್ಮನ್ನು ಉಳಿಸುವುದಿಲ್ಲವೆಂಬ ಕಠೋರ ವಾಸ್ತವವನ್ನು ಇಷ್ಟೆಲ್ಲಾ ಪ್ರಾಕೃತಿಕ ಅವಘಡಗಳು ಸಂಭವಿಸುತ್ತಿರುವ ಈ ಹೊತ್ತಿನಲ್ಲಾದರೂ ನಾವು ಅರ್ಥ ಮಾಡಿಕೊಳ್ಳಲೇಬೇಕಿದೆ.

ಗ್ರೇಟಾಳ ಚೈತನ್ಯ, ನಾಳೆ ಬದುಕಬೇಕೆಂಬ ಆಸೆ ಮತ್ತು ಕನಸು ಇರುವವರನ್ನೆಲ್ಲ ಹೊಕ್ಕಬೇಕಾಗಿದೆ. ಅದು ಮಾತ್ರ ನಮ್ಮ ಮಕ್ಕಳನ್ನು ಬದುಕಿಸಲು ಸಾಧ್ಯ. ಗ್ರೇಟಾ ಈ ಪ್ರಭುತ್ವಗಳ ಪರಿಸರ ನಾಶದ ದಾಹಕ್ಕೆ, ಮದ್ದಾನೆಗಳ ಕೊಬ್ಬಿಗೆ ಅಂಕುಶ ಹಾಕುತ್ತಿದ್ದಾಳೆ. ಈ ಅಂಕುಶ ವಿಶ್ವದ ಎಲ್ಲ ರಾಷ್ಟ್ರಗಳ ಎಲ್ಲ ಸರ್ಕಾರಕ್ಕೂ ತುರ್ತಾಗಿ ಬೇಕಾಗಿದೆ. ಎಲ್ಲ ಊರುಗಳಲ್ಲಿಯೂ ನಮಗೀಗ ಗ್ರೇಟಾ ತರಹದವರು ಬೇಕಾಗಿದ್ದಾರೆ. ಮದ್ದಾನೆಗಳಿಗೆ ಅಂಕುಶ ಹಾಕುವ ದಿಟ್ಟತನವಿರುವವರು! ಹೀಗಾಗೇ ಗ್ರೇಟಾ ಹುಟ್ಟುಹಾಕಿರುವ ಈ 'ಕ್ಲೈಮೇಟ್‌ಗಾಗಿ ಮುಷ್ಕರ' ಜಗತ್ತಿನಾದ್ಯಂತ ವಿಸ್ತರಿಸಬೇಕಿದೆ. ಎಲ್ಲ ಎಳೆಯರು, ಯುವಜನರು ಇದರ ಚುಕ್ಕಾಣಿ ಹಿಡಿಯಬೇಕಿದೆ. ನಾವು ಹಿರಿಯರು ಅವರ ಬೆನ್ನ ಹಿಂದೆ ನಿಂತು, ಅವರ ಆಸರೆಯಲ್ಲಿ ಒಂದಿಷ್ಟು ಬೆಳಕು ಕಾಣಬೇಕಿದೆ. ಇದೊಂದೇ ಎಲ್ಲರ ಉಳಿವಿನ ದಾರಿ ಎನ್ನಿಸುತ್ತಿದೆ.

ಇಂತಹ ಅನೇಕ ಮಹತ್ತರ ಅಂಶಗಳನ್ನು ಮತ್ತು ಹತ್ತಾರು ಘಟನೆಗಲ ರಸದೂಟವನ್ನು ನಾಗೇಶ ಹೆಗಡೆಯವರು ಈ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಮಕ್ಕಳಾದಿಯಾಗಿ ಪ್ರತಿಯೊಬ್ಬರೂ ಓದಲೇಬೇಕಾದ ಪುಸ್ತಕ ಇದಾಗಿದೆ. (ಮೂಕ ಪೃಥ್ವಿಗೆ ಮಾತು ಕೊಟ್ಟ ಕಿಶೋರಿ– ಗ್ರೇತಾ ಥನ್‌ಬರ್ಗ್ ಪುಸ್ತಕಕ್ಕೆ ಬೆಂಗಳೂರಿನ ಭೂಮಿಬುಕ್ಸ್–9449177628 ಸಂಪರ್ಕಿಸಬಹುದು.)

# ಒಗ್ಗಟ್ಟಾಗಿದ್ದರೆ ಚುನಾವಣೆ ಗೆಲುವು ಖಚಿತ: ಸಿ.ಎಂ

## ನಾವು ನಡೆಸಿರುವ ಎಲ್ಲಾ ಸಮೀಕ್ಷೆಗಳಲ್ಲೂ ಬೆಳಗಾವಿಯಲ್ಲಿ ಉತ್ತಮ ಪ್ರತಿಕ್ರಿಯೆ ಬಂದಿದೆ

**ಬೆಂಗಳೂರು:**
ನಾವು ನಡೆಸಿರುವ ಎಲ್ಲಾ ಸಮೀಕ್ಷೆಗಳಲ್ಲೂ ಬೆಳಗಾವಿಯಲ್ಲಿ ಉತ್ತಮ ಪ್ರತಿಕ್ರಿಯೆ ಬಂದಿದೆ. ಒಗ್ಗಟ್ಟಾಗಿ ಚುನಾವಣೆ ಮಾಡಿ. ಉತ್ತರ ಕನ್ನಡ ಜಿಲ್ಲೆ ಸೇರಿ ಬೆಳಗಾವಿಯ ಜಿಲ್ಲೆಗಳಿಗೆ ಒಳಪಡುವ ಮೂರೂ ಲೋಕಸಭಾ ಕ್ಷೇತ್ರಗಳಲ್ಲೂ ಖಚಿತವಾಗಿ ಗೆಲುವು ಸಾಧಿಸಬಹುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ಕಾವೇರಿಯಲ್ಲಿ ನಡೆದ ಬೆಳಗಾವಿ ಜಿಲ್ಲೆಯ ಸಚಿವರು, ಶಾಸಕರು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಮುಖಂಡರ ಸಭೆಯಲ್ಲಿ ಮುಖ್ಯಮಂತ್ರಿಗಳು ಬೆಳಗಾವಿಯ ಎರಡು ಲೋಕಸಭಾ ಕ್ಷೇತ್ರ ಹಾಗೂ ಬೆಳಗಾವಿ ಜಿಲ್ಲೆಯ ಎರಡು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುವ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಲ್ಲೂ ಗೆಲುವು ಸಾಧಿಸಬಹುದಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಐದು ಗ್ಯಾರಂಟಿ ಯೋಜನೆಗಳು ಬೆಳಗಾವಿ ಜಿಲ್ಲೆಯ ಲಕ್ಷಾಂತರ ಕುಟುಂಬಗಳ ಮತ್ತು ಮಹಿಳೆಯರ ಬದುಕಿನ ಸಂಕಟವನ್ನು ಕಡಿಮೆ ಮಾಡಿವೆ. ಇದಕ್ಕಾಗಿ ಯುವತಿಯರು ಮತ್ತು ಮಹಿಳೆಯರು ಶೇ80 ರಷ್ಟು ನಮ್ಮ ಪರವಾಗಿ ಇದ್ದಾರೆ ಎನ್ನುವ ಸಕಾರಾತ್ಮಕ ವರದಿ ಸಮೀಕ್ಷೆಗಳಿಂದ ಹೊರ ಬಂದಿವೆ. ನಾವು ಜನರ ಮನೆ ಬಾಗಿಲಿಗೆ ಹೋಗಿ ಪ್ರತೀ ತಿಂಗಳು ಪ್ರತೀ ಕುಟುಂಬಕ್ಕೆ 5–6 ಸಾವಿರ ರೂಪಾಯಿ ಕೊಡುತ್ತಿರುವ ಮತ್ತು ವರ್ಷಕ್ಕೆ 50–60 ಸಾವಿರ ಪ್ರತಿ ಕುಟುಂಬದ ಖಾತೆಗೆ ಜಮೆ ಆಗುತ್ತಿರುವುದನ್ನು ಮನವರಿಕೆ ಮಾಡಿಸಿ, ಜನರ ನಡುವೆ ಗಟ್ಟಿಯಾಗಿ ನಿಂತು ಗೆದ್ದು ಬನ್ನಿ ಎಂದು ಸಿಎಂ ಕರೆ ನೀಡಿದರು.

ಮುಖ್ಯಮಂತ್ರಿಗಳ ಭರವಸೆಯ ಮಾತುಗಳಿಗೆ ಸ್ಪಂದಿಸಿದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು, ಬೆಳಗಾವಿಯಲ್ಲಿ ನೆವು ಎಲ್ಲರೂ ಒಟ್ಟಾಗಿ ಅಖಾಡಕ್ಕೆ ಇಳಿದಿದ್ದೇವೆ. ಎರಡೂ ಕ್ಷೇತ್ರದಲ್ಲೂ ಗೆದ್ದು ಬಂದು ಈ ಗೆಲುವನ್ನು ನಿಮಗೆ ಅರ್ಪಿಸುತ್ತೇವೆ ಎಂದರು.

ಉತ್ತರ ಕನ್ನಡದಲ್ಲಿ ಬದಲಾವಣೆ ವಾತಾವರಣ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಲ್ಲೂ ಜನರ ಈ ಬಾರಿ ಬದಲಾವಣೆ ಬಯಸಿರುವುದು, ಹಿಂದಿನ ಸಂಸದರು ಕ್ಷೇತ್ರಕ್ಕೆ ಏನೂ ಮಾಡಿಲ್ಲ ಎನ್ನುವ ಅಭಿಪ್ರಾಯಗಳು ಉತ್ತರ ಕನ್ನಡ ಜಿಲ್ಲೆಯ ಜನರ ಆಕ್ರೋಶಕ್ಕೆ ಕಾರಣವಾಗಿದೆ ಎನ್ನುವ ಅಭಿಪ್ರಾಯಗಳು ಸಮೀಕ್ಷೆಗಳಲ್ಲಿ ವ್ಯಕ್ತವಾಗಿವೆ. ಹೀಗಾಗಿ ಇಲ್ಲೂ ಗೆಲುವಿನ ಅವಕಾಶಗಳು ಇವೆ ಎನ್ನುವ ಬಗ್ಗೆಯೂ ಸಭೆಯಲ್ಲಿ ಹಲವರು ಅಭಿಪ್ರಾಯ ವ್ಯಕ್ತಪಡಿಸಿದರು.

ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್, ಸತೀಶ್ ಜಾರಕಿಹೊಳಿ ಸೇರಿ ಮಾಜಿ ಸಚಿವರಾದ ಲಕ್ಷ್ಮಣ್ ಸವದಿ ಮತ್ತು ಜಿಲ್ಲೆಯ ಎಲ್ಲಾ ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ 40 ಕ್ಕೂ ಹೆಚ್ಚು ಮಂದಿ ಜಿಲ್ಲಾ ಮುಖಂಡರು ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

# 30 ಲಕ್ಷ ರೂ. ಮೌಲ್ಯದ ಶ್ರೀಗಂಧದ ತುಂಡು, 12.5 ಲಕ್ಷ ರೂ. ನಗದು ವಶ

**ಹಂಪಿ ಟೈಮ್ಸ್ ಹೊಸಪೇಟೆ**



ನಗರದ ಸಂಡೂರ ರಸ್ತೆಯಲ್ಲಿ ಅನಧಿಕೃತವಾಗಿ ಸಾಗಿಸುತ್ತಿದ್ದ ಶ್ರೀಗಂಧದ ಮರದ ತುಂಡುಗಳನ್ನು ಹೊಸಪೇಟೆ ಪಟ್ಟಣ ಠಾಣೆ ಪೊಲೀಸರು ವಾಹನಗಳ ಸಮೇತ ವಶಕ್ಕೆ ಪಡೆದಿದ್ದಾರೆ. ಶ್ರೀಗಂಧದ ಮೌಲ್ಯ ಸುಮಾರು 30,45,000 ರೂ ಇದ್ದು, ವಾಹನಗಳು ಸೇರಿ ಒಟ್ಟು 35.45000 ರೂ ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಜಿಲ್ಲೆಯ ಹೊಸಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಆಲೂರ್ ಚೆಕ್‌ಪೋಸ್ಟ್‌ನಲ್ಲಿ ಮೂರು ಪ್ರತ್ಯೇಕ ವಾಹನಗಳಲ್ಲಿ ಸಾಗಿಸುತ್ತಿದ್ದ ದಾಖಲೆ ರಹಿತ ನಗದು ಹಣ ಒಟ್ಟು 12,51,000 ರೂಗಳನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾ.24 ರಂದು ವಿಶ್ವಕ್ಷಯರೋಗ ದಿನಾಚರಣೆ

## ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ವಿ.ಇಂದ್ರಾಣಿ ಹೇಳಿಕೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕೇಂದ್ರ ವತಿಯಿಂದ 'ವಿಶ್ವ ಕ್ಷಯರೋಗ ದಿನಾಚರಣೆ' ಅಂಗವಾಗಿ ಸಾರ್ವಜನಿಕರಲ್ಲಿ ಕ್ಷಯರೋಗದ ಬಗ್ಗೆ ಅರಿವು ಮೂಡಿಸಲು ಮಾ.24 ರಂದು ಬೆಳಿಗ್ಗೆ 08 ಗಂಟೆಗೆ ಜಾಥಾ ಮತ್ತು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಆಸ್ಪತ್ರೆಯ ಡಿ.ಎನ್.ಬಿ ಸಭಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕೇಂದ್ರದ ಜಿಲ್ಲಾ ಕ್ಷಯರೋಗ ನಿರ್ಮೂಲನಾ ಅಧಿಕಾರಿ ಡಾ.ವಿ.ಇಂದ್ರಾಣಿ ಅವರು ತಿಳಿಸಿದ್ದಾರೆ.

ಜಾಥಾವು ಜಿಲ್ಲಾ ಆಸ್ಪತ್ರೆಯಿಂದ ಆರಂಭವಾಗಿ ರಾಯಲ್ ವೃತ್ತದವರೆಗೆ ಹಾಗೂ ರಾಯಲ್ ವೃತ್ತದಿಂದ ಜಿಲ್ಲಾ ಆಸ್ಪತ್ರೆಯವರೆಗೆ ಮರಳಲಿದೆ. ವೇದಿಕೆ ಕಾರ್ಯಕ್ರಮದಲ್ಲಿ 2023 ನೇ ಸಾಲಿಗೆ ಎನ್.ಟಿ.ಇ.ಪಿ ಕಾರ್ಯಕ್ರಮದಲ್ಲಿ ಉತ್ತಮ ಸೇವೆ ಸಲ್ಲಿಸಿರುವ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಸನ್ಮಾನ ಸಮಾರಂಭ ನಡೆಯಲಿದೆ.

# ಮಾ.25ಕ್ಕೆ ಶ್ರೀ ಯೋಗಿನಾರೇಯಣ ಯತೀಂದ್ರರ ಜಯಂತಿ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಶ್ರೀ ಯೋಗಿನಾರೇಯಣ ಯತೀಂದ್ರರ(ಕೈವಾರ ತಾತಾಯ್ಯ) ಜಯಂತಿಯನ್ನು ಲೋಕಸಭೆ ಚುನಾವಣೆ-2024ರ ಅಂಗವಾಗಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಸರಳ ಹಾಗೂ ಸಾಂಕೇತಿಕವಾಗಿ ಮಾ.25 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಚರಿಸಲಾಗುವುದು ಕನ್ನಡ,ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ತಿಳಿಸಿದ್ದಾರೆ.



**ಕವಿ ಮನಸು**

## ಹುತಾತ್ಮರ ಹಾದಿಯಲ್ಲಿ

ಕಾಮ್ರೇಡ್ ಕಾಮ್ರೇಡ್ ನಾವು ಕಾಮ್ರೇಡ್

ಜಾತಿ ಹೆಸರನು ಅಳಿಸಿ ಮಾನವತ್ವದಿ
ನಿಂತವರು
ಬಡವ ಬಲ್ಲಿದರೆಂಬ ಭೇದವ ಅಳಿದು
ಬೆಳೆದವರು
ರೈತ ಕೂಲಿ ಕಾರ್ಮಿಕರ ದುಡಿಮೆಗೆ ಧ್ವನಿ
ಎತ್ತಿದವರು//

ಲಾಠಿ ಬೂಟಿನ ದಬ್ಬಾಳಿಕೆ ತುಳಿತವ
ತಡೆಯಲು ಬಂದವರು
ನ್ಯಾಯ ನೀತಿಗೆ ಹೋರಾಡಲು
ಟೊಂಕಕಟ್ಟಿ ನಿಂತವರು
ಸಮ ಸಮಾಜ ಸರ್ಕಾರ ಕಟ್ಟಲು ಪಣ
ತೊಟ್ಟವರು//

ಸನ್ಮಾರ್ಗ ಸ್ವಾತಂತ್ರ್ಯ ಕಾಗಿ
ಹಗಲಿರುಳು ಹಂಬಲಿಸಿದವರು
ಸಾವಿರ ಕಷ್ಟ ಸಹಿಸಿ ಸಾಗಿ ಬಾಳಿದವರು
ಹಳ್ಳಿ ದಿಲ್ಲಿಯ ಜನಕೆ ಒಳ್ಳೇದು ಮಾಡಿ
ಹಾಡು ಹಾಡಿದವರು//

ಬಂಡವಾಳಿಗರ ಮೋಸದ ಜಾಲವ
ಬಯಲಿಗೆಳೆದವರು
ಸಾಮ್ರಾಜ್ಯ ದಾಹಿಗಳ ಮೋಹವ
ಕಿತ್ತೆಸೆದವರು
ಕ್ರಾಂತಿ ಜ್ಯೋತಿ ಹಿಡಿದು ಮೆರವಣಿಗೆ
ಹೊರಟವರು//

ಭಗತ್ ಸಿಂಗ್ ರಾಜಗುರು ಸುಖ ದೇವರ
ಸಂತತಿಯವರು
ಸ್ವಾತಂತ್ರ್ಯ ಭೂಮಿಗಾಗಿ
ನೇಣುಗಂಬವೇರಿ ಪ್ರಾಣ ತ್ಯಾಗ
ಮಾಡಿದವರು
ಬ್ರಿಟಿಷರೆದೆಯೊಳು ನಡುಕ ಹುಟ್ಟಿಸಿ ದೇಶ
ಉಳಿಸಿದವರು//

– ಉಮಾಮಹೇಶ್ವರ ಮುದೇನೂರು
ಹೊಸಪೇಟೆ

## ಸರ್ವ ಧರ್ಮ ಸಮನ್ವಯ ಜಾತ್ರೆ

ಬನ್ನಿ ಬಾಂಧವರೇ ಹಂಪಿ ಬಳಿಯ
ಹೊಸಪೇಟೆಗೆ
ಇಲ್ಲಿ ಜರುಗುವ ಸರ್ವ ಧರ್ಮ
ಸಮನ್ವಯ ಜಾತ್ರೆಗೆ
ತೇರಿನೊಳು ಜಾಗವಿಲ್ಲ ಯಾವ ದೇವರ
ಮೂರ್ತಿಗೆ
ತೇರಲಿಟ್ಟು ಪೂಜಿಸುವರು ಸರ್ವ ಧರ್ಮ
ಗ್ರಂಥಗಳಿಗೆ
ದೇಶದಲ್ಲೇ ವಿನೂತನವೀ ಸರ್ವ ಧರ್ಮ
ಜಾತ್ರೋತ್ಸವ
ಸದುದ್ದೇಶ ಇಲ್ಲಿದೆ ಸಾಧಿಸಲು ಕೋಮು
ಸಾಮರಸ್ಯವ
ತೇರಿಗಿದೆ ಸರ್ವ ಧರ್ಮ ಸಂತ-
ಗುರುವುಗಳ ಶಿಲ್ಪ ಕೆತ್ತನೆ
ಉದ್ದೇಶವೊಂದೇ ಸರ್ವರೊಳು
ಮೂಡಲು ಸದ್ಭಾವನೆ
ಪ್ರಕೃತಿ ಸಮತೋಲನಕೆ ನಡೆಯುತಿಹುದೀ
ಸಂಪ್ರದಾಯ
ಸರ್ವ ಧರ್ಮ ಮಹಿಳೆಯರಿಗೆ ಉಡಿ
ತುಂಬುವ ಕಾರ್ಯ
ಮೂಡುತಿರಲಿಲ್ಲಿ ಧರ್ಮ ಸಮ್ಮಿಲನದೀ
ವಿಶ್ವ ಭ್ರಾತೃತ್ವವು
ಲಿಂಗೈಕ್ಯ ಸಂಗನ ಬಸವ ಮಹಾ
ಸ್ವಾಮಿಗಳೇ ಆದರ್ಶವು.
ಸರ್ವ ಧರ್ಮ ಸಾರಗಳ ಮೂಟೆಯನು
ಹೊತ್ತು ತಂದು
ಸರ್ವ ಧರ್ಮದವರ ಶಿರದಿ ಹೊರಿಸಿ
ಮೆರೆಸುವ ಕಾಯಕ
ಭುಜದಿ ಹೊತ್ತು ಮಾಡುತಿಹರು ಸರ್ವ
ಧರ್ಮ ಸಂತರು
ಈ ಸತ್ಕಾರ್ಯಕೆ ಬೀಳದಿರಲಿ ಯಾವ
ಕೇಡುಗಣ್ಣ ನಜರು.

– ಎ. ಗೋವಿಂದ, ಹೊಸಪೇಟೆ

# ಮುಂಡರಗಿಯ ಬಸೀರಾ ವಕಾರದ್

## ಅಂತರಾಷ್ಟ್ರೀಯ ಸೈಕ್ಲಿಂಗ್ ಮತ್ತು ರಾಷ್ಟ್ರಮಟ್ಟದ ಕುಸ್ತಿ ಪಟು

ಅವರದು ತಂದೆ, ತಾಯಿ, ಏಳು ಜನ ಹೆಣ್ಣುಮಕ್ಕಳು ಮತ್ತು ಮೂರು ಗಂಡು ಮಕ್ಕಳನ್ನು ಹೊಂದಿರುವ ಬಡ ಕುಟುಂಬ. ಆರ್ಥಿಕವಾಗಿ ಅತ್ಯಂತ ಹಿಂದುಳಿದ ಈ ಕುಟುಂಬದಲ್ಲಿ ಜನಿಸಿದ ಕುಡಿಯೊಂದು ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ್ದು ಕೇವಲ ಆಕೆಯ ನಿರಂತರ ಪರಿಶ್ರಮ ಮತ್ತು ಸಾಧಿಸಬೇಕೆಂಬ ಛಲದಿಂದ. ಅಂತಹ ಛಲಗಾತಿಯೇ ನಮ್ಮ ಗದಗ ಜಿಲ್ಲೆಯ ಮುಂಡರಗಿಯ ಹೆಮ್ಮೆಯ ಕುವರಿ.... ಕುಮಾರಿ ಬಸೀರ ವಕಾರದ.

ಮನೆಯಲ್ಲಿ ಅತ್ಯಂತ ಕಠಿಣ ಆರ್ಥಿಕ ಪರಿಸ್ಥಿತಿ, 1996 ಜೂನ್ 15 ನೇ ತಾರೀಖಿನಂದು ಮುಸ್ಲಿಂ ಕುಟುಂಬದಲ್ಲಿ ಹುಟ್ಟಿದ ಬಸೀರಾ ಮನೆಯಲ್ಲಿ ನಾಲ್ಕು ಜನ ಅಕ್ಕಂದಿರು,ಇಬ್ಬರು ತಂಗಿಯರು ಮತ್ತು ಮೂರು ಜನ ಅಣ್ಣಂದಿರು. ಅಣ್ಣಂದಿರು ಕೂಡ ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ ತೊಡಗಿಸಿಕೊಂಡಿದ್ದು, ತಂದೆ ತಾಯಿಗೆ ವಯಸ್ಸಾಗಿದೆ. ಊರಿನಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗ ಆಕೆಯಲ್ಲಿರುವ ಕ್ರೀಡಾ ಪ್ರತಿಭೆಯನ್ನು ಗಮನಿಸಿದ ಶಾಲೆಯ ದೈಹಿಕ ಶಿಕ್ಷಕರಾದ ಎನ್.ಎನ್. ಕಲಕೇರಿ ಗುರುಗಳು ಆಕೆಗೆ ಗದಗ್ ನಲ್ಲಿರುವ ಕೆ.ಎಚ್. ಪಾಟೀಲ್ ಜಿಲ್ಲಾ ಕ್ರೀಡಾಂಗಣದಲ್ಲಿರುವ ಕ್ರೀಡಾ ಹಾಸ್ಟೆಲ್ ಗೆ ಭರ್ತಿಯಾಗಲು ಶಿಫಾರಸು ಮಾಡಿದರು

ಕ್ರೀಡಾ ಹಾಸ್ಟೆಲ್ ನಲ್ಲಿ ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು ನಿತ್ಯ ಕರ್ಮಗಳನ್ನು ಪೂರೈಸಿ ಅಡುಗೆಯವರು ಬೆಳಗಿನ ಜಾವದಲ್ಲಿಯೇ ಕೊಡುತ್ತಿದ್ದ ಮೊಳಕೆ ಕಾಳುಗಳನ್ನು ಸೇವಿಸಿ ತರಗತಿಗೆ ಹಾಜರಾಗುತ್ತಿದ್ದಳು ಬಸೀರಾ. ಗದುಗಿನ ಕೆ.ಎಚ್. ಪಾಟೀಲ್ ಜಿಲ್ಲಾ ಕ್ರೀಡಾಂಗಣದಲ್ಲಿ ಬೆಳಗಿನ 5:30 ರಿಂದ 7:30ರವರೆಗೆ ಕಠಿಣ ಸೈಕ್ಲಿಂಗ್ ತರಬೇತಿ ಪಡೆಯುತ್ತಿದ್ದಳು. ಗದುಗಿನ ವಿದ್ಯಾದಾನ ಸಮಿತಿಯ ಶಾಲೆಯಲ್ಲಿ ಆಕೆಯ ವಿದ್ಯಾಭ್ಯಾಸ ಸಾಗಿತ್ತು. 2008ರಲ್ಲಿ 6ನೇ ತರಗತಿಯಲ್ಲಿ ಇರುವಾಗ ತರಬೇತಿಯ ಮೊದಲ ವರ್ಷವೇ ಸೈಕ್ಲಿಂಗ್ ನಲ್ಲಿ ಚಿನ್ನದ ಪದಕವನ್ನು ಪಡೆದ ಈಕೆ, ಆ ವರ್ಷ ರಾಷ್ಟ್ರ ಮಟ್ಟದಲ್ಲಿ ನಡೆದ ಸೈಕ್ಲಿಂಗ್ ಸ್ಪರ್ಧೆಯಲ್ಲಿಯೂ ಚಿನ್ನದ ಪದಕ ಬಾಚಿಕೊಂಡಳು. ಅದೇ ವರ್ಷ ಭಾರತದ ಕೇಂದ್ರಾಡಳಿತ ಪ್ರದೇಶವಾದ ಪಾಂಡಿಚೇರಿಯಲ್ಲಿ ನಡೆದ ಅಂತರಾಷ್ಟ್ರೀಯ ಸೈಕ್ಲಿಂಗ್ ಪಂದ್ಯಾವಳಿಯಲ್ಲಿ ಭಾಗಿಯಾದಳು. 2009ರಲ್ಲಿ ಮತ್ತೊಂದು ಬಾರಿ ಸೈಕ್ಲಿಂಗ್ ರಾಜ್ಯ ಮಟ್ಟದ ಚಿನ್ನದ ಪ್ರಶಸ್ತಿಯನ್ನು ಪಡೆದಳು. ಶಿಕ್ಷಕರಾದ ಎಂ ಜೆ ಮರನೂರ್ ಮತ್ತು ಶರಣಗೌಡ ಬೇಲೇರಿಯವರು ಈಕೆಯ ಸಾಧನೆಗೆ ಪ್ರೇರಕರಾಗಿದ್ದರು. ಹಿಂದೆ ಗುರು ಮುಂದೆ ಗುರಿ.... ಸಾಧಿಸಲು ಮತ್ತಿನ್ನೇನು ಬೇಕು??



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಮುಂದೆ ಹೈಸ್ಕೂಲ್ ವಿದ್ಯಾಭ್ಯಾಸ ಮಾಡುತ್ತಿರುವಾಗ ಸೈಕ್ಲಿಂಗ್ ಮಾಡುವವರು ಕಡ್ಡಾಯವಾಗಿ ಸೈಕಲ್ ಖರೀದಿಸಲೇಬೇಕು ಎಂದಾದಾಗ ಅಷ್ಟೇನೂ ಹಣಕಾಸಿನ ಸೌಕರ್ಯವಿಲ್ಲದ ಬಸೀರಾ ಮನೆಯವರು ಸೈಕಲ್ ಖರೀದಿಸುವುದು ಸಾಧ್ಯವಿಲ್ಲ ಎಂದು ನಿರಾಕರಿಸಿದರು. ಇದರಿಂದ ಆಕೆಯ ಸೈಕ್ಲಿಂಗ್ ನಿಂತು ಹೋಯಿತು. ಬೇಲೇರಿ ಗುರುಗಳು ಈಕೆಗೆ ನೀಡಿದ ಸೈಕಲ್ ನಲ್ಲಿ ಮುಂಡರಗಿಯಿಂದ ಸುಮಾರು 40 ಕಿಲೋ ಮೀಟರ್ ದೂರದಲ್ಲಿರುವ ಜಿಲ್ಲಾ ಕೇಂದ್ರ ಗದಗ್ ಗೆ ಪ್ರತಿದಿನ ಸೈಕಲ್ಲಲ್ಲಿಯೇ ಪಯಣಿಸಿ ಶಾಲೆಗೆ ಹೋಗುತ್ತಿದ್ದಳು ಬಸೀರಾ. ಇದೇ ಸಮಯದಲ್ಲಿ ಆಕೆಯ ಪಾಲಕರನ್ನು ಭೇಟಿಯಾದ ಶರಣಗೌಡ ಬೇಲೇರಿ ಗುರುಗಳು ಆಕೆಗೆ ತಮ್ಮ ಮನೆಯಲ್ಲಿಯೇ ಊಟ ವಸತಿ ಒದಗಿಸಿ ಕಲಿಸುವುದಾಗಿ ಹೇಳಿ ತಮ್ಮ ಊರಾದ ಲಕ್ಕುಂಡಿಗೆ ಕರೆತಂದರು. ಬೇಲೇರಿ ದಂಪತಿಗಳ ಇಬ್ಬರು ಗಂಡು ಮಕ್ಕಳ ಜೊತೆಗೆ ಮೂರನೇ ಮಗಳಾಗಿ ಅವರ ಮನೆ ಸೇರಿದಳು ಬಸೀರಾ. ಬದುಕು ನೀಡಿದ ಮತ್ತೊಂದು ತಿರುವಿನಲ್ಲಿ ಬಸೀರಾಳನ್ನು ಕುಸ್ತಿ ಅಭ್ಯಾಸದಲ್ಲಿ ಆಕೆಯ ಗುರುಗಳು ತೊಡಗಿಸಿದರು. ಕೇವಲ ಒಂದೇ ವರ್ಷದಲ್ಲಿ ಅತ್ಯಂತ ನುರಿತ ಕುಸ್ತಿಪಟುವಾದ ಬಸೀರಾ 2010 ರಿಂದ ಸತತವಾಗಿ ರಾಜ್ಯಮಟ್ಟದ ಮತ್ತು ರಾಷ್ಟ್ರಮಟ್ಟದ ಮಹಿಳಾ ಕುಸ್ತಿ ಪಂದ್ಯಾವಳಿಗಳಲ್ಲಿ ಚಿನ್ನದ ಪದಕ ಪಡೆದಳು. 2010 ರಿಂದ 2016ರವರೆಗಿನ ದಸರಾ ಕ್ರೀಡಾಕೂಟದಲ್ಲಿ ಯಾವತ್ತೂ ಚಿನ್ನದ ಪದಕ ಬಿಟ್ಟುಕೊಡದ ಬಸೀರ ಳನ್ನು 2016ರ ದಸರಾ ಕ್ರೀಡಾಕೂಟದಲ್ಲಿ 'ಅತ್ಯುತ್ತಮ ಮಹಿಳಾ ಕುಸ್ತಿಪಟು' ಎಂದು ಗೌರವಿಸಲಾಯಿತು. ನಂತರ ಬಸೀರಾ ರಾಷ್ಟ್ರಮಟ್ಟದಲ್ಲಿಯೂ ದಕ್ಷಿಣ ಭಾರತ ವಿಭಾಗದಲ್ಲಿ ಸ್ಪರ್ಧಿಸಿ ಚಿನ್ನದ ಪದಕ ಪಡೆದಳು. ಹಲವಾರು ಪದಕಗಳನ್ನು ಸಂಪಾದಿಸಿದ ಬಸೀರಾ 25ಕ್ಕೂ ಹೆಚ್ಚು ಚಿನ್ನದ ಪದಕಗಳನ್ನು ಗೆದ್ದ ಕುಸ್ತಿಪಟುವಾಗಿ ಹೊರಹೊಮ್ಮಿದ್ದಾಳೆ. ರಾಷ್ಟ್ರಮಟ್ಟದಲ್ಲಿ ಈಕೆ ಗಳಿಸಿದ ಚಿನ್ನದ ಪದಕ ದೇಶಾದ್ಯಂತ ಈಕೆಯನ್ನು ಗುರುತಿಸುವಂತೆ ಮಾಡಿತು.



ಬಸೀರಾ ವಕಾರದ್

ಮುಂಡರಗಿಯ ಮನೆಮಗಳು ರಾಷ್ಟ್ರಮಟ್ಟದ ಮಹಿಳಾ ಕುಸ್ತಿ ಕ್ಷೇತ್ರದಲ್ಲಿ ಕಣ್ಮಣಿಯಾಗಿ ಪಾರಮ್ಯವನ್ನು ಮೆರೆದಳು ಎಂದರೆ ಅತಿಶಯೋಕ್ತಿಯೇನಲ್ಲ.

ಆಕೆಯ ಹುಟ್ಟೂರಾದ ಮುಂಡರಗಿಯಲ್ಲಿ, ಗದುಗಿನ ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳು ಮುಂಡರಗಿ ಪಟ್ಟಣಕ್ಕೆ ಕೀರ್ತಿ ತಂದ ಬಸೀರಾಳ ಸಾಧನೆಗೆ ಮೆಚ್ಚಿ ಗದುಗಿನ ತೋಂಟದಾರ್ಯ ಮಠದಲ್ಲಿ ನಡೆದ ಶಿವಾನುಭವ ಕಾರ್ಯಕ್ರಮದಲ್ಲಿ ಗೌರವ ಸನ್ಮಾನವನ್ನು ಮಾಡಿದರಲ್ಲದೆ ಆಕೆಯ ಪಾಲಕರು ಪ್ರಸ್ತುತ ಮುಂಡರಗಿ ಪಟ್ಟಣದಲ್ಲಿ ತೋಂಟದಾರ್ಯ ಮಠದ ಜಾಗದಲ್ಲಿ ವಾಸಿಸುತ್ತಿದ್ದು ಆ ನಿವೇಶನವನ್ನು ಬಸೀರಾಳಿಗೆ ಬಿಟ್ಟು ಕೊಡುವುದಾಗಿ ಆಶೀರ್ವದಿಸಿದರು.

ತನ್ನ ಕುಸ್ತಿ ಅಭ್ಯಾಸದ ಜೊತೆ ಜೊತೆಗೆ ಬಸೀರಾ ಗದುಗಿನ ಪಂಡಿತ ಪುಟ್ಟರಾಜ ಗವಾಯಿಗಳ ಕಾಲೇಜಿನಲ್ಲಿ ಕಲಾ ವಿಭಾಗದಲ್ಲಿ ಪದವಿಯನ್ನು ಪಡೆದಳು. ಮುಂದೆ ತನ್ನ ಆಟಕ್ಕೆ ಪೂರಕವಾಗಿ ಶ್ರೀ ಪ್ರಭುರಾಜೇಂದ್ರ ಶಾರೀರಿಕ ಶಿಕ್ಷಣ ಸಂಸ್ಥೆಯಿಂದ ಬಿ.ಪಿ.ಎಡ್. ಪದವಿ ಶಿಕ್ಷಣವನ್ನು ಕೂಡ ಪೂರೈಸಿದಳು.

ಹಲವಾರು ರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದ ಬಸೀರಾ ಒಂದೊಮ್ಮೆ ವಿಪರೀತ ಆರೋಗ್ಯ ತೊಂದರೆಯನ್ನು ಕೂಡ ಅನುಭವಿಸಿದಳು. 55ಕೆಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದ ಆಕೆ ಏಕಾಏಕಿ 40ಕೆಜಿ ವಿಭಾಗದಲ್ಲಿ ಸ್ಪರ್ಧಿಸಲು ತಯಾರಿ ಮಾಡಿಕೊಂಡ ಸಮಯದಲ್ಲಿನ ದೈಹಿಕ ವ್ಯತ್ಯಾಸಗಳು ಆಕೆಯನ್ನು ಇನ್ನಿಲ್ಲದಂತೆ ಹೈರಾಣುಗೊಳಿಸಿದವು. ನೀರಿನ ಕೊರತೆಯಿಂದ ಬಳಲಿದ ದೇಹ, ಹೆಜ್ಜೆ ಕಿತ್ತಿಡಲಾಗದಷ್ಟು ನೋವು ಸಂಕಟಗಳನ್ನು ಆಕೆ ಅನುಭವಿಸಿದಳು. ಆಕೆಯನ್ನು ಪರೀಕ್ಷಿಸಿದ ಹುಬ್ಬಳ್ಳಿಯ ಖ್ಯಾತ ವೈದ್ಯರು ಆಕೆಯು ಜೀವನ ಪರ್ಯಂತ ಮಾತ್ರೆಗಳ ಮೊರೆ ಹೋಗಬೇಕಾಗುತ್ತದೆ ಎಂದು ಹೇಳಿದರು.ಆರ್ಥಿಕವಾಗಿ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿದ್ದ ಬಸೀರ ಪಾಲಿಗೆ ಈ ಸಮಯದಲ್ಲಿ ಸಹಾಯ ಮಾಡಿದ್ದು ಬೆಂಗಳೂರು ಟಿವಿ9 ಚಾನೆಲ್ ಪ್ರಸಾರ ಮಾಡಿದ ಮಾರುವೇಷ ಕಾರ್ಯಕ್ರಮ. ಈಕೆಯ ಬಗ್ಗೆ ಅರಿತ ಬೆಂಗಳೂರಿನ ಮೊಹಮ್ಮದ್ ಎಂಬ ವ್ಯಕ್ತಿ, ಜೊತೆಗೆ ಮಹಾರಾಷ್ಟ್ರದ ರಾಹುಲ್ ಮತ್ತು ಅವರ ತಾಯಿ ಸಿಂಚನ ಪಾಟೀಲ್ ಎಂಬ ಕ್ರೀಡಾ ಪ್ರೇಮಿಗಳು ಆಕೆಯ ಆರೋಗ್ಯ ಸುಧಾರಿಸಲು ಹಣ ಸಹಾಯ ಮಾಡಿದರು. ಆದರೆ ನಿರಂತರವಾಗಿ ತರಬೇತಿ ಪಡೆಯುತ್ತಿದ್ದ, ಸದಾ ಚಟುವಟಿಕೆಯಿಂದಿರುತ್ತಿದ್ದ ಬಸಿರಾಳಿಗೆ ಕೆಲವೇ ತಿಂಗಳುಗಳಲ್ಲಿ ಆರೋಗ್ಯ ಸುಧಾರಿಸಿ ಇಂದು ಯಾವುದೇ ಔಷಧಿಗಳಿಲ್ಲದೆ ಆಕೆ ಜೀವನ ಸಾಗಿಸುತ್ತಿದ್ದಾಳೆ.

ಕಳೆದ ವರ್ಷ ಜನವರಿ 9, 2023ರಲ್ಲಿ ಆಕೆಯ ಕ್ರೀಡಾ ಸಾಧನೆಯನ್ನು ಪರಿಗಣಿಸಿ ಪೊಲೀಸ್ ಇಲಾಖೆಯ 'ಪೊಲೀಸ್ ಕಾನ್ಸ್ಟೇಬಲ್' ಹುದ್ದೆ ಆಕೆಯನ್ನು ಅರಸಿ ಬಂದಿತು. ಇದೀಗ ನೌಕರಿಯಲ್ಲಿ ಮುಂದುವರೆದಿರುವ ಬಸೀರಾ ಇತ್ತೀಚೆಗೆ ನಡೆದ ಅಖಿಲ ಭಾರತೀಯ ಪೊಲೀಸ್ ಸಿಬ್ಬಂದಿಗಳ ಕ್ರೀಡಾಕೂಟದಲ್ಲಿ ಭಾಗವಹಿಸಿ, ಕುಸ್ತಿ ವಿಭಾಗದಲ್ಲಿ ಕಂಚಿನ ಪದಕವನ್ನು (ಇದು ಕರ್ನಾಟಕ ಪೊಲೀಸ್ ಇಲಾಖೆಗೆ ಮಹಿಳಾ ಕುಸ್ತಿಯಲ್ಲಿ ದೊರೆತ ಮೊದಲ ಪದಕ) ಪಡೆದಿದ್ದಾರೆ.

ಬಸೀರಾಳ ಸಾಧನೆಯಿಂದ ಆಕೆಯ ಹೆತ್ತವರಿಗೂ ಕೂಡ ಹೆಮ್ಮೆ. ತಮ್ಮಿಂದ ಯಾವ ರೀತಿಯ ಸಹಾಯ,ಪ್ರೋತ್ಸಾಹ ನೀಡಲು ಸಾಧ್ಯವಾಗದಿದ್ದರೂ ಕೂಡ ಅಪಾರ ಸಾಧನೆ ಮಾಡಿದ ಮಗಳನ್ನು ಕೊಂಡಾಡುವ ಅವರು ಆಕೆಯ ಎಲ್ಲ ಸಾಧನೆಗೆ ಆಕೆಯ ಗುರುಗಳೇ ಕಾರಣ ಎಂದು ಕೃತಜ್ಞತೆಯಿಂದ ನೆನೆಯುತ್ತಾರೆ.

ಕಳೆದ ವರ್ಷ ಮಾರ್ಚ್ ನಲ್ಲಿ ಮಹಾಪೋಷಕರಾಗಿ ತನ್ನ ಏಳಿಗೆಗೆ ಕಾರಣರಾದ ಬೇಲೇರಿ ಗುರುಗಳು ನಿಧನ ಹೊಂದಿದ್ದು ಬಸೀರಾಗೆ ಅಪಾರ ನೋವನ್ನುಂಟು ಮಾಡಿದೆ. ಬೇಲೇರಿ ದಂಪತಿಗಳ ಸಹಾಯ ಹಸ್ತ ತನ್ನ ಮೇಲಿರದೆ ಹೋದರೆ ತಾನು ಇಂದು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ ಎಂಬುದು ಆಕೆಯ ಅಂಬೋಣ. ಆ ದಂಪತಿಗಳನ್ನು ಸದಾ ಕೃತಜ್ಞತೆಯಿಂದ ನೆನೆಸಿಕೊಳ್ಳುವ ಬಸೀರಾ ತನ್ನಂತೆಯೇ ವಿವಿಧ ಕ್ಷೇತ್ರಗಳಲ್ಲಿ ಆಸಕ್ತಿ ಇರುವ ಹೆಣ್ಣು ಮಕ್ಕಳಿಗೆ

"ಕಠಿಣ ಪರಿಶ್ರಮ ಮತ್ತು ಸಾಧನೆಯ ಮೂಲಕ ಯಶಸ್ಸಿನ ಹಾದಿಯನ್ನು ಕಂಡುಕೊಳ್ಳಬಹುದು. ಜೀವನದಲ್ಲಿ ಏನೇ ಎಡರು ತೊಡರುಗಳು ಬಂದರೂ ಸಾಧಿಸುವ ಛಲ ನಿಮ್ಮಲ್ಲಿದ್ದರೆ ಯಶಸ್ಸು ಕಟ್ಟಿಟ್ಟ ಬುತ್ತಿ" ಎಂದು ಹೇಳುವ ಬಸಿರಾ ಇದೀಗ ಬೆಂಗಳೂರಿನ ಪೊಲೀಸ್ ಇಲಾಖೆಯಲ್ಲಿ ಮಹಿಳಾ ಪೊಲೀಸ್ ಪೇದೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸದ್ಯದಲ್ಲಿಯೇ ಮೇಲ್ದರ್ಜೆಯ ಹುದ್ದೆಗೆ ಭರ್ತಿ ಪಡೆಯಲಿರುವ ಬಸಿರಾ ವಕಾರದರವರ ಮುಂದಿನ ಕ್ರೀಡಾ ಜೀವನ ಮತ್ತು ವೈಯುಕ್ತಿಕ ಜೀವನ ಸಂತಸಮಯವಾಗಿರಲಿ. ಆಕೆಯ ಸಾಧನೆ ಇನ್ನಷ್ಟು ಹೆಣ್ಣು ಮಕ್ಕಳ ಜೀವನದಲ್ಲಿ ದಾರಿದೀಪವಾಗಲಿ.


# ಹಂಪಿ ಶ್ರೀಮಂತ ಕಲಾ ಸಂಸ್ಕೃತಿ ಸ್ಮಾರಕಗಳ ವೀಕ್ಷಿಸಿದ ಕರ್ನಾಟಕ ಕೇಡರ್ ಅಧಿಕಾರಿಗಳ ತಂಡ

**ಹಂಪಿ ಟೈಮ್ಸ್ ಹೊಸಪೇಟೆ**

ವಿಶ್ವ ಪ್ರಸಿದ್ಧ ಹಂಪಿಗೆ ಕರ್ನಾಟಕ ಕೇಡರ್‌ನ ಅಧಿಕಾರಿಗಳು ಶುಕ್ರವಾರ ಭೇಟಿ ನೀಡಿ ಹಂಪಿಯ ಶ್ರೀಮಂತ ಕಲಾ ಸಂಸ್ಕೃತಿ ಪರಂಪರೆಯ ಸ್ಮಾರಕಗಳಿಗೆ ಮಾರುಹೋಗಿ ಹರ್ಷ ವ್ಯಕ್ತಪಡಿಸಿದರು.

2021, 2022 ಬ್ಯಾಚಿನ ಕರ್ನಾಟಕ ಕೇಡರ್ IAS, IPS, IFS ಅಧಿಕಾರಿಗಳ ತಂಡ ಕರ್ನಾಟಕ ದರ್ಶನ ಕಾರ್ಯಕ್ರಮದ ಅಡಿಯಲ್ಲಿ, ವಿಶ್ವ ಪ್ರಸಿದ್ಧ ಹಂಪಿಗೆ ಇಂದು ಭೇಟಿ ನೀಡಿದ್ದಾರೆ. ಮೊದಲಿಗೆ ವಿಜಯ ವಿಠಲ ದೇವಸ್ಥಾನವನ್ನು ನೋಡಿ ಅದರಲ್ಲೂ ವಿಶೇಷವಾಗಿ 50 ರೂಪಾಯಿ ನೋಟಿನಲ್ಲಿ ಮುದ್ರಣವಾಗಿರುವ ನೋಟು ಹಿಡಿದು ಫೋಟೋವನ್ನು ತೆಗೆಸಿಕೊಂಡರು. ರಾಣಿ ಸ್ನಾನ ಗೃಹ, ಕಮಲ್ ಮಾಲ್, ಗಜ ಶಾಲೆ, ಉಗ್ರ ನರಸಿಂಹ, ಬಡವಿ ಲಿಂಗ, ಸಾಸ್ವಿಕಾಳು ಗಣೇಶ, ವಿರುಪಾಕ್ಷೇಶ್ವರ ದೇವಸ್ಥಾನ ವೀಕ್ಷಿಸಿದರು. ಈ ಸಂದರ್ಭದಲ್ಲಿ ವಿರೂಪಾಕ್ಷಿ ವಿ ಹಂಪಿ ಗೈಡ್ ಮಾಡಿದರು, ರಮೇಶ್ ಕೆಎಸ್‌ಟಿಡಿಸಿ ಸಿಬ್ಬಂದಿ ಇದ್ದರು.

2022ರ ಐಎಎಸ್ ತರಬೇತಿ ಬ್ಯಾಚಿನ ಬೆಳಗಾವಿಯ ಶುಭಮ್ ಶುಕ್ಲ, ದಕ್ಷಿಣ ಕನ್ನಡದ ಮುಕುಲ್ ಜೈನ್, ರಾಯಚೂರಿನಸಾಹಿತ್ಯ ಎಂ.ಆಲದಕಟ್ಟಿ, ಗುಲ್ಬರ್ಗಾದ ಗಜಾನನ ಬಾಲೆ, ಐಪಿಎಸ್ ತರಬೇತಿ ಬ್ಯಾಚಿನ ಉಡುಪಿಯ ಹರ್ಷ ಪ್ರಿಯಾಮ್ವಾದ, ವಿಜಯಪುರದ ಶಾಲೂ, ಹಾಸನದ ಸಮ ವರ್ಗೀಸ್ ಹಾಗೂ 2021 ಐಎಫ್‌ಎಸ್ ತರಬೇತಿ ಬ್ಯಾಚಿನ ಹಾಸನದ ಪುಲ್ಕಿಟ್ ಮೀನಾ, ಮೈಸೂರಿನ ಅಭೀಶೇಕ್.ವಿ ಇದ್ದರು.



# ಪೊಲೀಸ್‌ರಿಂದ ವಿವಿಧೆಡೆ ಮದ್ಯ ವಶ, 4 ಪ್ರಕರಣ ದಾಖಲು

**ಹಂಪಿ ಟೈಮ್ಸ್ ಬಳ್ಳಾರಿ**

ಲೋಕಸಭೆ ಸಾರ್ವತ್ರಿಕ ಚುನಾವಣೆ ಹಿನ್ನಲೆಯಲ್ಲಿ ಮಾದರಿ ನೀತಿ ಸಂಹಿತೆ ಜಾರಿಯಿರುವುದರಿಂದ ಅಬಕಾರಿ ಪೊಲೀಸ್ ಅಧಿಕಾರಿಗಳಿಂದ ಗುರುವಾರ ವಿವಿಧೆಡೆ ದಾಳಿ ನಡೆಸಿ ಅಪಾರ ಮೌಲ್ಯದ ಮದ್ಯ ವಶಪಡಿಸಿಕೊಂಡು 04 ಪ್ರಕರಣ ದಾಖಲಿಸಲಾಗಿದೆ ಎಂದು ಅಬಕಾರಿ ಉಪ ಆಯುಕ್ತ ಎನ್.ಮಂಜುನಾಥ ಅವರು ತಿಳಿಸಿದ್ದಾರೆ.

ಬಳ್ಳಾರಿ ತಾಲ್ಲೂಕಿನ ಚಾನಾಳ್ ಗ್ರಾಮದ ಚಾನಾಳ್ ಕ್ರಾಸ್‌ನಲ್ಲಿ ರಸ್ತೆಗಾವಲು ಸಮಯದಲ್ಲಿ ದ್ವಿಚಕ್ರ ವಾಹನದಲ್ಲಿ 21.600 ಲೀ ಮದ್ಯ ಮತ್ತು 7.920 ಲೀ. ಬಿಯರ್ (ಅಂದಾಜು ಮೌಲ್ಯ ರೂ.89650) ಅನ್ನು ಸಾಗಾಣೆ ಮಾಡುತ್ತಿರುವುದನ್ನು ಜಪ್ತಿ ಮಾಡಿ, ವಾಹನ ಸಾವರನನ್ನು ವಶಕ್ಕೆ ಪಡೆದುಕೊಂಡು ಪ್ರಕರಣ ದಾಖಲಿಸಲಾಗಿದೆ.

ಹಲಕುಂದಿ ಚೆಕ್‌ಪೋಸ್ಟ್‌ನಲ್ಲಿ ರಾಂಪುರ ಕಡೆಯಿಂದ ಬರುವ ಬಸ್ಸಿನಲ್ಲಿ ವ್ಯಕ್ತಿಯೋರ್ವನು 01 ಲೀಟರ್ ಸಾಮರ್ಥ್ಯದ 12 ಪ್ಲಾಸ್ಟಿಕ್ ಬಾಟಲಿಗಳಲ್ಲಿ ಸೇಂದಿ 12.000 ಲೀಟರ್ (ಅಂದಾಜು ಮೌಲ್ಯ ರೂ.600) ಅನಧೀಕೃತವಾಗಿ ಸಾಗಾಟ ಮಾಡುತ್ತಿರುವುದನ್ನು ಜಪ್ತಿ ಮಾಡಿ, ಪ್ರಕರಣ ದಾಖಲಿಸಲಾಗಿದೆ.

ಬಳ್ಳಾರಿ ನಗರದ ರೂಪನಗುಡಿ ರಸ್ತೆಯಲ್ಲಿ ಅಬಕಾರಿ ಪೊಲೀಸ್ ಅಧಿಕಾರಿಗಳು ಗಸ್ತು ಸಮಯದಲ್ಲಿ ಕಪ್ಪು ಬಣ್ಣದ ತ್ರಿಚಕ್ರ ವಾಹನದಲ್ಲಿ 25.920 ಲೀ. ಜಪ್ತು ವಸ್ತುಗಳ (ಅಂದಾಜು ಮೌಲ್ಯ ರೂ. 36520) ಮದ್ಯವನ್ನು ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆಹಚ್ಚಿ, ವಾಹನ ಸಾವರನ್ನು ವಶಕ್ಕೆ ಪಡೆದುಕೊಂಡು ಮದ್ಯ ಮತ್ತು ಆಟೋವನ್ನು ಜಪ್ತುಮಾಡಿ ಪ್ರಕರಣ ದಾಖಲಿಸಲಾಗಿದೆ.

ಬಳ್ಳಾರಿ ತಾಲ್ಲೂಕಿನ ಬೊಮ್ಮನಹಾಳ್ ಚೆಕ್‌ಪೋಸ್ಟ್‌ನಲ್ಲಿ ವಾಹನ ತಪಾಸಣೆ ಸಮಯದಲ್ಲಿ ಅಕ್ರಮವಾಗಿ ಸಾಗಾಣೆ ಮಾಡುತ್ತಿದ್ದ 17.280 ಲೀ (ರೂ.7680 ಮೌಲ್ಯದ) ಮದ್ಯವನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ
ತೆಂಗಿನಕಾಯಿ, ಬಾಳೆ ಹಣ್ಣು, ತಾಜಾ ನುಗ್ಗೆಕಾಯಿ ಮತ್ತು
ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿರಿ
Organic Coconut & Banana, Moringa oleifera Available in best Price
98458 65204 ಮೃತ್ಯುಂಜಯನಗರ, ಹೊಸಪೇಟೆ


## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ । ಸಂವತ್ಸರ: ಶೋಭಾಕೃತ

**23–03–2024 – ಶನಿವಾರ**

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂರ್ವ ಫಾಲ್ಗುಣಿ |
| ಯೋಗ | : ಶೂಲ |
| ಕರಣ | : ತೈತುಲ |
| ಸೂರ್ಯೋದಯ | : 06:28:58 |
| ಸೂರ್ಯಾಸ್ತ | : 18:38:01 |
| ರಾಹು | : 09:31–11:02 |
| ಯಮಘಂಡ | : 14:05–15:36 |
| ಗುಳಿಕ | : 06:29–08:00 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 22–03–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1582.07 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 765 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.556 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1592.81 ಅಡಿ |
| ಒಳ ಹರಿವು | 997 ಕ್ಯುಸೆಕ್ |
| ಹೊರ ಹರಿವು | 8645 ಕ್ಯುಸೆಕ್ |
| ಸಾಮರ್ಥ್ಯ | 13.537 ಟಿಎಂಸಿ |

## ವ್ಯವಹಾರಗಳ ಮೇಲೆ ನಿಗಾ

ಮೊದಲ ಪುಟದಿಂದ

ಸಂದರ್ಭದಲ್ಲಿ ಅಕ್ರಮವಾಗಿ ಹಣ ಸರಬರಾಜು ಪ್ರಕರಣಗಳು ಸಂಭವಿಸದಂತೆ ತೀವ್ರ ಕಟ್ಟೆಚ್ಚರ ವಹಿಸಬೇಕು. ಈ ಹಿನ್ನೆಲೆಯಲ್ಲಿ ಅನುಮಾನಾಸ್ಪದ ಬ್ಯಾಂಕಿನ ವ್ಯವಹಾರಗಳ ಮೇಲೆ ತೀವ್ರ ನಿಗಾವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಜಿಪಂ ಸಿಇಒ ಸದಾಶಿವ ಪ್ರಭು ಬಿ., ಎಸ್ಪಿ ಶ್ರೀಹರಿಬಾಬು, ಜಿಲ್ಲಾ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿ ಲೋಕೇಶ, ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ ಬಾಲಕೃಷ್ಣ ಭಟ್ ಸೇರಿದಂತೆ ಇತರರು ಇದ್ದರು. ಬ್ಯಾಂಕಿನ ಅಧಿಕಾರಿಗಳು ಇದ್ದರು.

# ವೀರಭದ್ರೇಶ್ವರ ಸ್ವಾಮಿ, ರೇಣುಕಾಚಾರ್ಯರ ಜೋಡಿ ರಥೋತ್ಸವ ಭಕ್ತಸಮೂಹದೊಂದಿಗೆ ಅದ್ದೂರಿ



■ ಹಂಪಿ ಟೈಮ್ಸ್ ಕೊಟ್ಟೂರು

ಪಟ್ಟಣದ ಕೋಟೆ ವೀರಭದ್ರೇಶ್ವರ ಸ್ವಾಮಿ ಮತ್ತು ಜಗದ್ಗುರು ರೇಣುಕಾ ಚಾರ್ಯ ಭಗವತ್ಪಾದರ ಜೋಡಿ ರಥೋತ್ಸವವು ಶುಕ್ರವಾರ ಸಂಜೆ 6. ಗಂಟೆಗೆ ಸಾವಿರಾರು ಭಕ್ತಸ್ತೋಮದಲ್ಲಿ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವವು ಜರುಗುವ ಮುನ್ನ ಶ್ರೀ ಸ್ವಾಮಿಯ ಪಟಾಕ್ಷಿಯನ್ನು 1.50 ಲಕ್ಷ ರೂ.ಗೆ ಹಳ್ಳಿ ಗಂಗಮ್ಮ ಹರಾಜು ಪ್ರಕ್ರಿಯೆಯಲ್ಲಿ ತಮ್ಮದಾಗಿಸಿಕೊಂಡರು.

ಹರಾಜು ಪ್ರಕ್ರಿಯೆ ಮುಗಿಯುತ್ತಿದ್ದಂತೆ ಶಿವಪ್ರಕಾಶ್ ದೇವರು ಕೊಟ್ಟೂರೇಶ್ವರ ಸ್ವಾಮಿ ಕ್ರಿಯಾವಮೂರ್ತಿಗಳು ಮಹಲ್ ಮಠ ಕೊಟ್ಟೂರು ಇವರು ಜೋಡಿ ರಥೋತ್ಸವಕ್ಕೆ ಚಾಲನೆ ನೀಡಿದರು.

ರಥೋತ್ಸವಕ್ಕೆ ಚಾಲನೆ ನೀಡುತ್ತಿದ್ದಂತೆ ನೆರದಿದ್ದ ಸಾವಿರಾರು ಸಂಖ್ಯೆಯ ಭಕ್ತರು ಜಯ ಘೋಷ ಕೂಗುತ್ತ ಸಮಳ, ನಂದಿಧ್ವಜ ಮೆರವಣಿಗೆ ಮೂಲಕ ರಥಗಳನ್ನು ಎಳೆದರು.

ಜೋಡಿ ರಥೋತ್ಸವವು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ಹಿರೇಮಠ ಮುಂಭಾಗದಿಂದ ಸಾಗಿ ಗಾಂಧೀಜಿ ಸರ್ಕಲ್ ಮೂಲಕ ಉಜ್ಜಿನಿ ಸರ್ಕಲ್ ಮಾರ್ಗವಾಗಿ ಮತ್ತೆ ದೇವಸ್ಥಾನದ ಬಳಿ ಮೆರವಣಿಗೆಯೊಂದಿಗೆ ಉತ್ಸವ ಆಗಮಿಸಿತು. ಈ ವೇಳೆ ಅರ್ಚಕರು, ದೈವಸ್ಥರು ಮತ್ತು ಆಯಗಾರರು ಹಾಗೂ ಸಾವಿರಾರು ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು. ಭಕ್ತರು ರಥೋತ್ಸವವನ್ನು ಕಣ್ತುಂಬಿಕೊಂಡರು.

# ಹೋಳಿ, ರಂಜಾನ್ ಹಬ್ಬವನ್ನು ಶಾಂತಿಯಿಂದ ಆಚರಿಸಿ : ರಂಗಯ್ಯ

■ ಹಂಪಿ ಟೈಮ್ಸ್ ಹರಪನಹಳ್ಳಿ

ಹೋಳಿ ಹಬ್ಬದ ದಿನ ಎಸ್ ಎಸ್ ಎಲ್ ಸಿ.ಪರೀಕ್ಷೆ ಇರುವುದರಿಂದ ಪರೀಕ್ಷೆಗೆ ಹೋಗುವ ಮಕ್ಕಳಿಗೆ ಬಣ್ಣ ಹಾಕಬಾರದು. ಪರೀಕ್ಷೆಗೆ ಹೋಗುವ ಮಕ್ಕಳಿಗೆ ಎರಚದಂತೆ ಸರಳವಾಗಿ ಆಚರಿಸಿ ಎಂದು ಅರಸೀಕೆರೆ ಪಿಎಸ್ಐ. ಕೆ.ರಂಗಯ್ಯ ತಿಳಿಸಿದರು.

ಹೋಳಿ ಹಬ್ಬ ಮತ್ತು ರಂಜಾನ್‌ದ ಶಾಂತಿ ಸಭೆಯಲ್ಲಿ ಮಾತನಾಡಿದರು. ಹಬ್ಬವನ್ನು ಯಾವುದೇ ಅಹಿತಕರ ಘಟನೆ ನಡೆಯದಂತೆ ಶಾಂತಿಯುತವಾಗಿ ಆಚರಣೆ ಮಾಡಬೇಕು.ಇತ್ತೀಚಿನ ದಿನಗಳಲ್ಲಿ ಸೈಬರ್ ಕ್ರೈಮ್ ಗಳು ಹೆಚ್ಚಾಗುತ್ತಿದ್ದು ಇದರ ಬಗ್ಗೆ ಎಚ್ಚರದಿಂದ ಇರಬೇಕು, ಅಂತಹ ಘಟನೆಗಳು ನಡೆದರೆ ತಕ್ಷಣ ಸೈಬರ್ ಹೆಲ್ಪ್ ಲೈನ್ 1930 ಕ್ಕೆ ಕರೆ ಮಾಡಿ.

**ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹೋಗುವ ಮಕ್ಕಳಿಗೆ ಬಣ್ಣ ಹಾಕಬಾರದು**

ಯಾವುದೇ ಊರುಗಳಲ್ಲಿ ಅಹಿತಕರ ಘಟನೆಗಳು, ಬಾಲ್ಯ ವಿವಾಹ, ಅಪಘಾತಗಳು ನಡೆದರೆ ತಕ್ಷಣ 112 ಕ್ಕೆ ಕರೆಮಾಡಿರೆ ತಕ್ಷಣ ಸ್ಥಳಕ್ಕೆ ಆಗಮಿಸುತ್ತದೆ ಎಂದು ಎಲ್ಲಾ ಸಮುದಾಯದ ಮುಖಂಡರಿಗೆ ಮನವಿ ಮಾಡಿದರು.

ಮುಖಂಡರಾದ ಪ್ರಶಾಂತ್ ಪಾಟೇಲ್ ಮಾತನಾಡಿ, ನಮ್ಮ ಊರಿನಲ್ಲಿ ಯಾವುದೇ ಹಬ್ಬಗಳಾದರು ಹಿಂದು–ಮುಸ್ಲಿಂ ಜನಾಂಗದವರು ಸೇರಿ ಒಗ್ಗಟ್ಟಿನಿಂದ, ಸಂತೋಷದಿಂದ ಹಬ್ಬ ಆಚರಣೆ ಮಾಡುತ್ತೇವೆ.

ಪ್ರತಿಯೊಂದು ಹಬ್ಬವೂ ಶಾಂತಿ ಹಾಗೂ ಸರಳತೆಯಿಂದ ಆಚರಣೆ ಮಾಡುತ್ತೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕ್ರೈಮ್ ಪಿಎಸ್ಐ. ಭೀಮ್ ದಾಸ್, ಮುಖಂಡರಾದ ಪೂಜಾರ್ ಮರಿಯಪ್ಪ, ಅದಾಮ್ ಸಾಹೇಬ್, ರಫೀಕ್ ಸಾಹೇಬ್, ಕೆ. ಮಹಾಂತೇಶ್, ಮಹಮ್ಮದ್ ಸಾಹೇಬ್, ಹನುಮಂತಪ್ಪ, ಲಕ್ಷ್ಮಣ್, ಮತೀನ್ ಸಾಹೇಬ್, ಅಯೂಬ್ ಸಾಹೇಬ್ ಶಫಿವುಲ್ಲಾ,ನವೀನ್,ಪೊಲೀಸ್ ಸಿಬ್ಬಂದಿಗಳಾದ ಕೂಲಹಳ್ಳಿ ಕೊಟ್ರೇಶ್, ಚಿದಾನಂದ,ಹಸೇನ್ ಸಾಹೇಬ್,ರೋಹಿತ್,ನಟರಾಜ್ ಹಾಗೂ ಹನುಮನಹಳ್ಳಿ, ರಾಮನಗರ, ಮಾದಿಹಳ್ಳಿ, ಉಚ್ಚಂಗಿದುರ್ಗ,ಅರಸೀಕೆರೆ ಹಾಗೂ ವಿವಿಧ ಗ್ರಾಮಗಳ ಗ್ರಾಮಸ್ಥರು ಉಪಸ್ಥಿತರಿದ್ದರು



# ನೀತಿ ಸಂಹಿತೆ ಪಾಲಿಸದ ರೈಲ್ವೆ ಅಧಿಕಾರಿಗಳ ವಿರುದ್ಧ ಆಕ್ರೋಶ



■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ರೈಲು ನಿಲ್ದಾಣದಲ್ಲಿ ಶುಕ್ರವಾರ ಮಧ್ಯಾಹ್ನ 01–30ಕ್ಕೆ ರೈಲು ನಿಲ್ದಾಣಕ್ಕೆ ಬಂದು ನಿಂತಿದ್ದ ರೈಲಿಗೆ ಪ್ರಧಾನಿ ನರೇಂದ್ರ ಮೋದಿ, ಮಹಾರಾಷ್ಟ್ರ ಮುಖ್ಯಮಂತ್ರಿ ಅವರ ಮತ್ತು ರೈಲ್ವೆ ಸಚಿವರು ಚಿತ್ರ ಇರುವ ಜಾಹೀರಾತು ಫಲಕಗಳು ಲೋಕಸಭಾ ಚುನಾವಣಾ ಮಾದರಿ ನೀತಿ ಸಂಹಿತೆ ನಡುವೆಯೂ ರಾರಾಜಿಸುತ್ತಿವೆ. ಚುನಾವಣಾ ಅಧಿಕಾರಿಗಳು, ರೈಲ್ವೆ ಸಿಬ್ಬಂದಿಗಳು ಮೌನವಾಗಿರುವುದೇಕೆ ಎಂದು ವಿಜಯನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಿಂಬಗಲ್ ರಾಮಕೃಷ್ಣ ಕಿಡಿಕಾರಿದ್ದಾರೆ. ಎಲ್ಲಾ ಕೊಂಡಿಗಳಿಗೆ ಇದ್ದರು ಕೂಡ ಚುನಾವಣೆ ಹಿನ್ನಲೆಯಲ್ಲಿ ತೆಗೆದು ಹಾಕಲು ಯಾರು ಕ್ರಮ ಕೈಗೊಂಡಿಲ್ಲ, ಈ ಬಗ್ಗೆ ಚುನಾವಣೆ ಅಧಿಕಾರಿಗಳು ಮತ್ತು ಸಂಬಂಧಿತ ರೈಲ್ವೆ ಸಿಬ್ಬಂದಿ ಮೌನವಾಗಿರುವುದು ಚುನಾವಣೆ ಕಾನೂನು ಇದೆ ಇಲ್ಲವೊ ಅನ್ನಿಸುತ್ತದೆ ಈ ಬಗ್ಗೆ ಕೇಂದ್ರ ಮತ್ತು ರಾಜ್ಯ ಚುನಾವಣೆ ಆಯೋಗದ ಅಧಿಕಾರಿಗಳು ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

# ವಿಧಾನಸಭಾ ಕ್ಷೇತ್ರದ ಗಡಿ ಭಾಗದ ತಪಾಸಣಾ ಕೇಂದ್ರ ನಿರ್ಮಾಣ

■ ಹಂಪಿ ಟೈಮ್ಸ್ ಕೂಡ್ಲಿಗಿ

ಮುಂಬರುವ ಲೋಕಸಭಾ ಚುನಾವಣೆಯನ್ನು ಶಾಂತಿಯುತ ಹಾಗೂ ನಿರ್ಭೀತಿಯಿಂದ ನಡೆಯುವಂತೆ ಮಾಡಲು ಎಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಎಚ್.ಎನ್. ರಘು ತಿಳಿಸಿದ್ದಾರೆ.



ತಾಲೂಕು ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದ ಗಡಿ ಭಾಗದ ಡಿ. ಸಿದ್ದಾಪುರ, ಕೊಂಬಿಹಳ್ಳಿ, ಆಲೂರು, ಉಜ್ಜನಿ ನಾಲ್ಕು ತಪಾಸಣಾ ಕೇಂದ್ರಗಳನ್ನು ತೆರೆಯಲಾಗಿದೆ. ಇದರಲ್ಲಿ ಒಬ್ಬ ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ಅಧಿಕಾರಿ, ಒಬ್ಬ ವಿಡಿಯೋಗ್ರಾಫರ್, ಮೂರರಿಂದ ನಾಲ್ಕು ಜನ ಪೊಲೀಸರು ಇರಲಿದ್ದಾರೆ. ಚುನಾವಣಾ ಅಕ್ರಮಗಳ ಮೇಲೆ ತೀವ್ರ ನಿಗಾ ವಹಿಸಲಾಗಿದೆ. ಪ್ರತಿ ಕೇಂದ್ರದಲ್ಲಿ ಮೂರು ಪಾಳೆಯದಲ್ಲಿ ಸಿಬ್ಬಂದಿ ಕಾರ್ಯಾನಿರ್ವಹಿಸುತ್ತಿದೆ. ಯಾವುದೇ ವ್ಯಕ್ತಿ ಸೂಕ್ತ ದಾಖಲೆಗಳಿಲ್ಲದೆ 50 ಸಾವಿರಕ್ಕಿಂತ ಹೆಚ್ಚು ಹಣ ತೆಗೆದುಕೊಂಡು ಹೋಗುವಂತಿಲ್ಲ. ಕ್ಷೇತ್ರದಲ್ಲಿ ಚುನಾವಣೆಯನ್ನು ಪಾರದರ್ಶಕವಾಗಿ ನಡೆಸಲು ಕ್ಷಿಪ್ರ ಸಂಚಾರಿ ದಳ, ಮೂರು ವೀಡಿಯೋ ಕಣ್ಗಾವಲು ತಂಡದಿಂದ ವಿಡಿಯೋ ಚಿತ್ರೀಕರಣ, ವೆಚ್ಚ ಚಲನ ವಲನ ತಂಡ ಸೇರಿದಂತೆ 22 ಸೆಕ್ಟರ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಹೇಳಿದರು.

ಕ್ಷೇತ್ರದಲ್ಲಿ 2011ರ ಜನಗತಿಯಂತೆ 109170 ಗಂಡು, 104947 ಹೆಣ್ಣು ಸೇರಿದಂತೆ 214117 ಜನಸಂಖ್ಯೆ ಹೊಂದಿತ್ತು. 2023ರ ಅಂದಾಜಿನಂತೆ ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದಲ್ಲಿ 165699 ಗಂಡು, 151104 ಹೆಣ್ಣು ಹಾಗೂ 12 ಜನ ಇತರೆ ಸೇರಿದಂತೆ 316815 ಜನಸಂಖ್ಯೆ ಹೊಂದಿದೆ. ಇದರಲ್ಲಿ 105036 ಗಂಡು, 102586 ಹೆಣ್ಣು ಹಾಗೂ 11 ಜನ ಇತರೆ ಸೇರಿದಂತೆ 207633 ಮತದಾರರಿದ್ದಾರೆ. ಇವರಲ್ಲಿ 1512 ಗಂಡು, 1115 ಹೆಣ್ಣು ಸೇರಿದಂತೆ ಒಟ್ಟು 2627 ಜನ ಅಂಗವಿಕಲ ಮತದಾರರು ಹಾಗೂ 529 ಗಂಡು, 922 ಹೆಣ್ಣು ಸೇರಿದಂತೆ 1451 ಜನ 85 ವರ್ಷ ಮೇಲ್ಪಟ್ಟ ಮತದಾರರಿದ್ದಾರೆ. ಅರ್ಜುನ ಚಿನ್ನೇನಹಳ್ಳಿ ಗ್ರಾಮದಲ್ಲಿನ ಮತಗಟ್ಟೆ ಸಂಖ್ಯೆ 99ರಲ್ಲಿ ಅತಿ ಹೆಚ್ಚು ಅಂದರೆ 1467 ಮತದಾರರಿದ್ದಾರೆ. ಅದೇ ರೀತಿ ತಿಪ್ಪೇಹಳ್ಳಿಯ ಮತಗಟ್ಟೆ ಸಂಖ್ಯೆ 200ರಲ್ಲಿ 219 ಮತದಾರರಿದ್ದು, ಅತಿ ಕಡಿಮೆ ಮತದಾರದನ್ನು ಹೊಂದಿರುವ ಮತ ಕೇಂದ್ರವಾಗಿದೆ. ಪಟ್ಟಣದ ಆಜಾದ್ ನಗರದಲ್ಲಿನ ತಾಹ ಶಾಲೆಯಲ್ಲಿದ್ದ ಮತಗಟ್ಟೆ ಸಂಖ್ಯೆ 36ರನ್ನು ಎಪಿಎಂಸಿ ಕಟ್ಟಡಕ್ಕೆ ಹಾಗೂ ಮತಗಟ್ಟೆ ಸಂಖ್ಯೆ–37ನ್ನು ಪಟ್ಟಣ ಶ್ರೀನಗರ ಕಾಲೋನಿಯ ಮುಂಭಾಗದಲ್ಲಿನ ಪಟ್ಟಣ ಪಂಚಾಯ್ತಿ ಸಮುದಾಯ ಭವನಕ್ಕೆ ಸ್ಥಳಾಂತರ ಮಾಡಲಾಗಿದೆ. ಕಳೆದ ಚುನಾವಣೆಯಲ್ಲಿ 245 ಮತಗಟ್ಟೆಗಳಿದ್ದು, ಈ ಬಾರಿ ಮಾಡ್ಲಕನಹಳ್ಳಿ ಗೊಲ್ಲರಹಟ್ಟಿ, ನುಂಕನಹಳ್ಳಿ, ಮಡಕಲಕಟ್ಟೆ ಗೊಲ್ಲರಹಟ್ಟಿಯಲ್ಲಿ ತಲಾ ಒಂದರಂತೆ ಒಟ್ಟು 5 ಮತಗಟ್ಟೆಗಳನ್ನು ಹೊಸದಾಗಿ ಸ್ಥಾಪನೆ ಮಾಡಿದ್ದು, ಒಟ್ಟು 250 ಮತಗಟ್ಟೆಗಳಾಗಿವೆ ಎಂದು ಅವರು ವಿವರಿಸಿದರು. ತಹಸೀಲ್ದಾರ್ ರಾಜು ಪಿರಂಗಿ, ಉಪ ತಹಸೀಲ್ದಾರ್ ಚಂದ್ರಶೇಖರ್, ಚುನಾವಣಾ ಸಹಾಯಕ ನಾಗರಾಜು ಕೆ. ಪಾಲ್ಗೊಂಡಿದ್ದರು.

# ಜೀವ ಬಲಿಗಾಗಿ ಕಾದಿದೆ ಟ್ಯಾಂಕ್ ಸೆಂಟ್ರಿಗ್!

## ಟ್ಯಾಂಕ್ ನಿರ್ಮಾಣಕ್ಕೆ ಸೆಂಟ್ರಿಗ್‌ಗೆ ಪೋಲ್ಸ್, ಹಲಗಿ, ಪ್ಲೇಟ್ ಕಟ್ಟಿ 3 ವರ್ಷ

## ಸ್ಥಳೀಯ ನಿವಾಸಿಗಳು, ವಾಹನ ಸವಾರರಿಗೆ ಹೆಚ್ಚಿದ ಆತಂಕ । ಸುರಕ್ಷತೆ ಕಲ್ಪಿಸಲು ಜನರ ಆಗ್ರಹ

■ ಬಂದಾತರ ಪ್ರಕಾಶ್
ಹಂಪಿ ಟೈಮ್ಸ್ ಕೊಟ್ಟೂರು

ಪಟ್ಟಣದ ಬಸವೇಶ್ವರ ನಗರದಲ್ಲಿನ 24/7 ಶುದ್ಧ ನೀರಿನ ಏರ್ ಟ್ಯಾಂಕ್‌ಗೆ ಹಾಕಿರುವ ಸೆಂಟ್ರಿಗ್ ಪರಿಕರಗಳು ಅವಘಡ ಆಹ್ವಾನಿಸುವಂತ್ತಿದ್ದು ಸಂಬಂಧ ಪಟ್ಟ ಅಧಿಕಾರಿಗಳು ಶೀಘ್ರ ಈ ಬಗ್ಗೆ ಗಮನಹರಿಸಬೇಕೆಂದು ಅಲ್ಲಿನ ನಿವಾಸಿಗಳು ಆಗ್ರಹಿಸಿದರು.

24/7 ಏರ್‌ಟ್ಯಾಂಕ್ ನಿರ್ಮಾಣ ಪ್ರಾರಂಭಗೊಂಡಿದ್ದು 2019–20 ನೇ ಸಾಲಿನಲ್ಲಿ, ಕೋವೀಡ್ ಕಾರಣ ಒಂದು ವರ್ಷ ಟ್ಯಾಂಕ್ ನಿರ್ಮಾಣ ಕಾರ್ಯ ನೆನಗುದಿಗೆ ಬಿದ್ದು, ಮತ್ತೆ 2021 ನೇ ಸಾಲಿನ ಪ್ರಾರಂಭದಲ್ಲಿ ಚಾಲನೆ ಪಡೆದುಕೊಂಡು, ವರ್ಷ ಅಂತ್ಯದ ವೇಳೆಗೆ ಟ್ಯಾಂಕ್ ಭಾಗಶಃ ನಿರ್ಮಾಣವಾಗಿದೆ, ಸೆಂಟ್ರಿಂಗ್ ಪರಿಕರಗಳು ಏರ್ ಟ್ಯಾಂಕ್‌ಗೆ ಆ ಸಮಯದಲ್ಲಿ ಹಾಕಿರುವಂತವು ಎಂಬುದು ಅಲ್ಲಿನ ನಿವಾಸಿಗಳ ಹೇಳಿಕೆ.

ಟ್ಯಾಂಕ್ ನಿರ್ಮಾಣಕ್ಕೆ ಹಾಕಿರುವ ಸೆಂಟ್ರಿಗ್ ಸುಮಾರು 3 ವರ್ಷ ಪೂರೈಸುತ್ತಿದ್ದು ಅದಕ್ಕೆ ಹಾಕಿರುವ ಪೋಲ್ಸ್ ಮತ್ತು ಅಗ್ಗ ಹಾಗೂ ಕಟ್ಟಿಗೆಯ ಹಲಗೆಗಳು ಗಾಳಿ, ಮಳೆ, ಬಿಸಿಲಿಗೆ ಸಂಪೂರ್ಣ ಹಾಳಗಿದ್ದು, ಯಾವ ಸಮಯದಲ್ಲಿ ಬೇಕಾದರು ಕಳಚಿ ಬೀಳುವ ಸಾಧ್ಯತೆ ಇದೆ ಎಂಬುದು ಅಲ್ಲಿನ ನಿವಾಸಿಗಳ ಆತಂಕವಾಗಿದೆ.

ಟ್ಯಾಂಕ್ ಪಕ್ಕದಲ್ಲಿಯೇ ರಸ್ತೆ ಇದ್ದು ಅಲ್ಲಿನ ನಿವಾಸಿಗಳು ಕಾರು, ಬೈಕ್ ಸೇರಿದಂತೆ ಮನುಷ್ಯರು ಓಡಾಡುವುದು ಕೂಡಾ ಅದೇ ರಸ್ತೆಯಲ್ಲಿ, ಜೊತೆಗೆ ಟ್ಯಾಂಕ್ ಪಕ್ಕದಲ್ಲಿ ಹೆಚ್ಚು ಮರ ಇರುವುದರಿಂದ ಮಕ್ಕಳು ನೆರಳಿನಲ್ಲಿ ಆಟವಾಡುತ್ತಿರುತ್ತಾರೆ. ಆ ಕಾರಣ ಯಾವ ಕ್ಷಣದಲ್ಲಿ ಪರಿಕರಗಳು ಕುಸಿದು ಬೀಳುತ್ತವೆ ಎಂಬ ಭಯ ದಲ್ಲೆ ಜೀವನ ದೂಡುತ್ತಿದ್ದಾರೆ.



ಭಾಗಶಃ ನಿರ್ಮಾಣಗೊಂಡಿರುವ ಏರ್ ಟ್ಯಾಂಕ್ ಗೆ ಸೆಂಟ್ರಿಗ್ ಹಾಕಿರುವ ಪರಿಕರಗಳು ಗುಣಮಟ್ಟ ಕಳೆದುಕೊಂಡಿವೆ ಕಾರಣ ಅವದಿ 3 ವರ್ಷ ಆಗಿದೆ, ಈಗಾಗಲೇ ಇಲ್ಲಿನ 24/7 ಯೋಜನೆ ರದ್ದಾಗಿದೆ ಎಂಬ ಚರ್ಚೆಗಳಿದ್ದು, ಮತ್ತೆ ನಿರ್ಮಾಣಕ್ಕೆ ಮುಂದಾದರೆ ಹಾಕಿ ಆದರೆ ಸಂಭವಿಸಬಹುದಾದ ಅವಘಡವನ್ನು ತಪ್ಪಿಸಲು, ಸಂಬಂಧ ಪಟ್ಟ ಅಧಿಕಾರಿಗಳು ನಿರ್ಲಕ್ಷ್ಯಸದೆ ಶೀಘ್ರ ತೆರವುಗೊಳಿಸಿ.

**– ಮಂಜುನಾಥ**
ಬಸವೇಶ್ವರ ನಗರ ನಿವಾಸಿ. ಕೊಟ್ಟೂರು

ಕೊಟ್ಟೂರು ಪಟ್ಟಣ ಪಂಚಾಯತಿ ಅಧಿಕಾರವಹಿಸಿಕೊಂಡು ವಾರವಾಗಿದೆ 24/7 ಏರ್ ಟ್ಯಾಂಕ್ ಎಲ್ಲಿ ನಿರ್ಮಾಣವಾಗಿದೆ ಗಮನಕ್ಕಿಲ್ಲ ಎಂಜಿನಿಯರಿಂದ ಮಾಹಿತಿ ಪಡೆದು ಪರಿಶೀಲನೆಗೆ ಮುಂದಾಗುವೆ.

**– ತುಕಾರಾಮ ಯಮನಪ್ಪ ಮಾದರ,**
ಪ.ಪಂ ಮುಖ್ಯಾಧಿಕಾರಿ, ಕೊಟ್ಟೂರು

24/7 ಶುದ್ಧ ನೀರಿನ ಯೋಜನೆ ಸಂಪೂರ್ಣ ಕ್ಯಾನ್ಸಲ್ ಆಗಿದೆ ಎಂಬ ಚರ್ಚೆಗಳು ನಡೆಯುತ್ತಿದ್ದು, ಭಾಗಶಃ ನಿರ್ಮಾಣಗೊಂಡು ಮಾನವನ ಅಸ್ಥಿ ಪಂಜರದಂತೆ ಗೋಚರಿಸುತ್ತಿರುವ ಈ ಶುದ್ಧ ನೀರಿನ ಟ್ಯಾಂಕ್ ಗೆ ಅಳವಡಿಸಿರುವ ಪೋಲ್ಸ್ ಮತ್ತು ಕಬ್ಬಿಣದ ಪ್ಲೇಟ್‌ಗಳು ಗಾಳಿಗೆ ಅಲುಗಾಡುತ್ತಿವೆ. ಶೀಘ್ರ ತೆರವುಗೊಳಿಸಿ ಸುರಕ್ಷತೆ ಕಲ್ಪಿಸಬೇಕೆಂದು ನಿವಾಸಿಗಳು ಆಗ್ರಹಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA